X

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೮
ವಿಚಾರ ಸಾಹಿತ್ಯಮಾಲೆ – ೨೯
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಹಿಂದೂ ಶಾಸ್ತ್ರಗಳು ಮತ್ತು ಸಂಸ್ಕಾರಗಳು

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)



# ಹಿಂದೂ ಶಾಸ್ತ್ರಗಳು ಮತ್ತು ಸಂಸ್ಕಾರಗಳು

ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
**ವಿ. ಎ. ಕೆ. ಅಯ್ಯರ್**

ಅನುವಾದ
**ಎಚ್. ಎಲ್. ಚಂದ್ರಶೇಖರ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Hindu Shashtragalu mattu Samskaragalu :** Kannada translation of *Answer to the quest* by **V.A.K. Iyer ;** Kannada translation by **Dr. H.L. Chnadrashekhara;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxiv + 49 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxiv + ೪೯
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

# ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೮

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತ್ತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧-೦೯-೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯-೦೮-೨೦೦೯ರ ಬೆಳಗ್ಗೆ ೧೧-೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

### (ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ. ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಡಾ. ಎಚ್.ಎಲ್. ಚಂದ್ರಶೇಖರ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಬಾ.ವೇ. ಶ್ರೀಧರ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಹಿಂದೂ ಶಾಸ್ತ್ರಗಳು ಮತ್ತು ಸಂಸ್ಕಾರಗಳು' ಎಂಬ ಪುಸ್ತಕ ಖ್ಯಾತ ಲೇಖಕರಾದ ಡಾ. ಎಚ್.ಎಲ್. ಚಂದ್ರಶೇಖರ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

## ಮುನ್ನುಡಿ

ಈ ಪುಸ್ತಿಕೆಯಲ್ಲಿ ಶ್ರೀ ವಿ.ಎ.ಕೆ. ಅಯ್ಯರ್ ಅವರು ಹಿಂದೂ ಧಾರ್ಮಿಕ ಗ್ರಂಥಗಳ ಆಧಾರಗಳು ಮತ್ತು ಸಂಸ್ಕಾರಗಳನ್ನು ಕುರಿತಾದ ಉತ್ತಮವಾದ ಹಾಗೂ ಉಪಯುಕ್ತವಾದ ಮಾಹಿತಿಗಳನ್ನು ನೀಡಿದ್ದಾರೆ. ಮನು ಧರ್ಮಕ್ಕೆ ಸಾಧನಗಳಾದ ಶ್ರುತಿ, ಸ್ಮೃತಿ, ಸಜ್ಜನರ ನಡುವೆ ಹಾಗೂ ಅಂತಃಕರಣಕ್ಕೆ ಒಪ್ಪುವ ನಾಲ್ಕನ್ನು ತಿಳಿಸಿದ್ದಾನೆ. ಯಾಜ್ಞವಲ್ಕ್ಯನು ಸಮ್ಯಕ್ ಸಂಕಲ್ಪಜ ಕಾಮವನ್ನು ಹಾಗೂ ಹದಿನಾಲ್ಕು ವಿದ್ಯಾಸ್ಥಾನಗಳನ್ನು ಸೇರಿಸಿದ್ದಾನೆ. ಆರು ಅಂಗಗಳೂ ಸೇರಿದ ವೇದಗಳೇ ಅತ್ಯುತ್ತಮವಾದುವು ಎಂದೂ ಮನು ಹೇಳಿದ್ದಾನೆ. ವಿಶಾಲವಾದ ಅರ್ಥದಲ್ಲಿ ಸ್ಮೃತಿಯಲ್ಲಿ ಇತಿಹಾಸ, ಪುರಾಣಗಳು, ಉಪಪುರಾಣಗಳು, ತಂತ್ರ ಮತ್ತು ಆಗಮಗಳೂ ಸೇರಿವೆ. ಅಯ್ಯರ್ ಅವರು ಈ ಎಲ್ಲ ಅಧಿಕೃತ ಗ್ರಂಥಗಳನ್ನು ಉದಾಹರಿಸಿದ್ದಾರೆ. ಎರಡನೆಯ ಭಾಗದಲ್ಲಿ ಅವರು ಸಂಸ್ಕಾರಗಳನ್ನು ಅಧ್ಯಯನ ಮಾಡಿದ್ದಾರೆ. ಶುದ್ಧೀಕರಣಗೊಳಿಸುವ ಹಾಗೂ ಧಾರ್ಮಿಕ ಆಚರಣೆಗಳು ನಲವತ್ತೆಂಟು ಎಂದು ತಿಳಿಯಲಾಗಿದೆ. ಕೆಲವು ಸಾರಿ ಅವುಗಳು ೪೦, ೨೫, ೧೬ ಅಥವಾ ೮ ಎಂದೂ ಭಾವಿಸಲಾಗಿದೆ. ಆಧುನಿಕ ಕಾಲದಲ್ಲಿ ಸಾಮಾನ್ಯವಾಗಿ ಉಪನಯನ, ವಿವಾಹ ಮತ್ತು ಅಂತ್ಯೇಷ್ಟಿಗಳನ್ನು ಆಚರಿಸಲಾಗುತ್ತದೆ. ಇವೆಲ್ಲವನ್ನು ಇಲ್ಲಿ ಸಂಗ್ರಹವಾಗಿ ಆದರೆ ಸ್ಪಷ್ಟವಾಗಿ ವಿವರಿಸಲಾಗಿದೆ.

ಈ ಪುಸ್ತಿಕೆಯು ಖಂಡಿತವಾಗಿ ಜನರ ಮೆಚ್ಚಿಗೆಯನ್ನು ಗಳಿಸುತ್ತದೆ: ಅದಕ್ಕಾಗಿ ಶ್ರೀ ಅಯ್ಯರ್ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನಮ್ಮ ಕರ್ತವ್ಯ.

ಭಾರತೀಯ ವಿಧ್ಯಾಭವನ
ಬಾಂಬೆ – ೭
ಜುಲೈ, ೧೭, ೧೯೭೧

**ಜಯಂತ್‌ಕೃಷ್ಣ ಎಚ್. ದವೆ.**
ಗೌ. ನಿರ್ದೇಶಕರು



## ಮೂಲ ಲೇಖಕರ ನುಡಿ

ಈ ಪುಸ್ತಕದ ವಿಷಯವು ಪ್ರಾರಂಭದಲ್ಲಿ ಬೆಂಗಳೂರಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಆರು ಕಂತುಗಳಲ್ಲಿ ಪ್ರಕಟಗೊಂಡಿತ್ತು. ಡಾ. ಆರ್. ಆರ್. ದಿವಾಕರ್ ಸಲಹೆಯ ಮೇರೆಗೆ ಪುಸ್ತಕದ ಉದ್ದೇಶಕ್ಕಾಗಿ ಈಗ ಈ ಲೇಖನಗಳನ್ನು ಪರಿಶೀಲಿಸಿ, ಅಲ್ಲಲ್ಲಿ ತಿದ್ದುಪಡಿ ಮಾಡಿ ವಿಸ್ತೃತ ರೂಪಕ್ಕೆ ತರಲಾಗಿದೆ.

ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದಿರುವುದಕ್ಕಾಗಿ ಪ್ರೊ. ಜೆ.ಎಚ್. ದವೆಯವರಿಗೆ ಮತ್ತು ಲೇಖನಗಳನ್ನು ಪ್ರಸ್ತುತ ರೂಪಕ್ಕೆ ತರಲು ಅನುಮತಿ ನೀಡಿದ 'ಡೆಕ್ಕನ್ ಹೆರಾಲ್ಡ್'ಗೆ ನಾನು ಆಭಾರಿಯಾಗಿದ್ದೇನೆ.

**ವಿ.ಎ.ಕೆ. ಅಯ್ಯರ್**

**Blank Page**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಮುನ್ನುಡಿ | xviii |
| ಮೂಲ ಲೇಖಕರ ನುಡಿ | xix |
| **ಭಾಗ – ೧ ಹಿಂದೂ ಶಾಸ್ತ್ರಗಳು** | ೧ |
| ೧. ವೇದಗಳು | ೩ |
| ೨. ವೇದಾಂಗಗಳು | ೯ |
| ೩. ಉಪವೇದಗಳು | ೧೫ |
| ೪. ಕಲೆಗಳು | ೧೮ |
| **ಭಾಗ – ೨ ಹಿಂದೂ ಸಂಸ್ಕಾರಗಳು** | **೨೩** |
| ೫. ಸಂಸ್ಕಾರ ವಿಧಿಗಳು ವಿಷಯಗಳು | ೨೫ |
| ೬. ಇತಿಹಾಸ ಮತ್ತು ಅದರ ಆಕರಗಳು | ೨೮ |
| ೭. ಸಾಮಾನ್ಯ ಅಂಶಗಳು | ೩೨ |
| ೮. ಜನ್ಮಪೂರ್ವ ಸಂಸ್ಕಾರಗಳು | ೩೪ |
| ೯. ಜನನಾನಂತರದ ಸಂಸ್ಕಾರಗಳು | ೩೭ |
| ಅನುಬಂಧ : ವೇದಗಳು ಮತ್ತು ಅವುಗಳ ಶಾಖೆಗಳ ಪಟ್ಟಿ | ೪೭ |

Blank Page



# ಹಿಂದೂ ಶಾಸ್ತ್ರಗಳು ಮತ್ತು ಸಂಸ್ಕಾರಗಳು

ಭಾಗ ೧

# ಹಿಂದೂ ಶಾಸ್ತ್ರಗಳು

**BLANK**

# ೧. ವೇದಗಳು

ಧರ್ಮ ಮತ್ತು ಬ್ರಹ್ಮವಸ್ತುವೇ ಸಮಸ್ತ ಹಿಂದೂ ಶಾಸ್ತ್ರಗಳ ವಿಷಯ. ಸಂಸ್ಕೃತ ಭಾಷೆಯಲ್ಲಿರುವ ಈ ಶಾಸ್ತ್ರಗಳು ವ್ಯಕ್ತವಾದವು. ಇವು ಗುರುಶಿಷ್ಯ ಪರಂಪರೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ರವಾನಿಸಲ್ಪಟ್ಟವು. ಹೀಗೆ ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಬಂದ ಸಾಹಿತ್ಯದಲ್ಲಿ ಮೊದಲು ಬರುವುದು ವೇದಗಳು. ಇತರ ಸಾಹಿತ್ಯಗಳು ವೇದಗಳನ್ನು ಆಧರಿಸಿ ಬೆಳೆದುಬಂದುವು.

ಹಿಂದಿನ ಕಲ್ಪದ ಕೊನೆಯಲ್ಲಿ ಪ್ರಳಯವಾಗಿತ್ತು. ಆಗ ಅಭಿಮಾನಿ ದೇವತೆಯಾಗಿದ್ದ ರುದ್ರನು ತನ್ನ ಕರ್ತವ್ಯದಂತೆ ಈಗಿನ ಶ್ವೇತವರಾಹ ಕಲ್ಪಕ್ಕೆ ಒಬ್ಬ ಹೊಸ ಬ್ರಹ್ಮನನ್ನು ಸೃಷ್ಟಿಸಿದನು. ಈ ಬ್ರಹ್ಮನು ತನ್ನ ಪೂರ್ವಪುಣ್ಯದ ಫಲವಾಗಿ ಈಗಿನ ಕಲ್ಪಕ್ಕೆ ಅಧಿದೇವತೆಯಾಗಿ ಆರಿಲಸ್ಪಟ್ಟನು. ಅನಂತರ ರುದ್ರನು ಹೊಸ ವಿಶ್ವವೊಂದನ್ನು ಸೃಷ್ಟಿಸುವಂತೆ ಬ್ರಹ್ಮನಿಗೆ ನಿರ್ದೇಶಿಸಿ ಅದೃಶ್ಯನಾದನು.

ಬ್ರಹ್ಮನು ತನ್ನ ಕಾರ್ಯವನ್ನು ಕೈಗೊಳ್ಳಲು ಪ್ರಾರಂಭಿಸಿದಾಗ ಅವನಿಗೆ ಗಾಬರಿಯಾಯಿತು. ಕಾರಣ, ದೀರ್ಘಕಾಲಾಂತರದಿಂದಾಗಿ ಆತನು ಸೃಷ್ಟಿವಿಧಾನವನ್ನು ಸಂಪೂರ್ಣವಾಗಿ ಮರೆತಿದ್ದನು. ಆದ್ದರಿಂದ ಆತನು ಕಠಿಣ ತಪಸ್ಸನ್ನು ಕೈಗೊಂಡನು. ಇದರ ಫಲವಾಗಿ ರುದ್ರನು ಬ್ರಹ್ಮನಿಗೆ (ಆಗ ಆತನು ಪ್ರಜಾಪತಿಯೆಂದು ಕರೆಯಲ್ಪಡುತ್ತಿದ್ದನು) ಪ್ರತ್ಯಕ್ಷವಾಗಿ ಆತನಿಗೆ ಸೃಷ್ಟಿತಂತ್ರವನ್ನು ಬೋಧಿಸಿದನು.

ಈಶ್ವರನ ಬೋಧನೆಯಂತೆ ಪ್ರಜಾಪತಿಯು ತಪಸ್ಸು ಅಥವಾ ಧ್ಯಾನ ಮಾಡಿದನು. ಆಗ ಭಗವಂತನು ಆತನಿಗೆ ಪ್ರಣವರೂಪದಲ್ಲಿ ಪ್ರತ್ಯಕ್ಷನಾದನು. ವೇದಗಳು ಬ್ರಹ್ಮನನ್ನು ಲಕ್ಷೋಪಲಕ್ಷ ಸೂರ್ಯರಂತೆ ಆವರಿಸಿಕೊಂಡಾಗ ಬ್ರಹ್ಮನಿಗೆ ಏನು ಮಾಡಲೂ ತೋಚದಾಯಿತು. ಜ್ಞಾನಕ್ಕಾಗಿ ದೇವರಲ್ಲಿ ಮೊರೆಯಿಟ್ಟನು. ಆಗ ದೇವರು ದಯಾಮಯನಾಗಿ ಬ್ರಹ್ಮನಿಗೆ ನಾಲ್ಕು ವೇದಗಳನ್ನು ಬೋಧಿಸಿದನು. ಆನಂತರ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದ.

ದೇವರು ಪ್ರಣವದಿಂದ ನಾಲ್ಕುವೇಗಳನ್ನು ಸೃಷ್ಟಿಸಿದ. "ಅ" ಕಾರದಿಂದ ಋಗ್ವೇದವನ್ನು "ಉ" ಕಾರದಿಂದ ಯಜುರ್ವೇದವನ್ನು "ಮ" ಕಾರದಿಂದ ಸಾಮವೇದವನ್ನು ಮತ್ತು ಅರ್ಧಮಾತ್ರೆಯಿಂದ ಅಥರ್ವವೇದವನ್ನು ಸೃಷ್ಟಿಸಿದ.

ಮಂತ್ರಶಾಸ್ತ್ರದ ದೃಷ್ಟಿಯಿಂದ ವೇದದ ಸೃಷ್ಟಿಯನ್ನು ಈ ರೀತಿ ವಿವರಿಸಲಾಗಿದೆ:

ಶುದ್ಧ ಬೆಳಕೇ ಆಗಿರುವ ದೇವರ ಮನಸ್ಸು ತನ್ನ ವೃತ್ತಿ ಅಥವಾ ಚಲನೆಯೊಂದಿಗೆ ಬೆರೆತಾಗ ವಾಕ್ ಉಂಟಾಯಿತು. ವಾಕ್ ಪ್ರಾಣದೊಂದಿಗೆ ಬೆರೆತು ವಾಕ್‌ನ ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂಬ ರೂಪಗಳು ಒಂದರ ನಂತರ ಒಂದು ಉಂಟಾದವು. ಕೊನೆಯದಾಗಿ ವೈಖರಿಯಿಂದ ವೇದಗಳು ಪ್ರಕಟಗೊಂಡವು.

ಚತ್ವಾರಿ ವಾಕ್ ಪರಿಮಿತಾ ಪದಾನಿ
ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ ।
ಗುಹಾ ತ್ರೀಣಿ ನಿಹಿತಾ ನೇಂಗಯಂತಿ
ತುರೀಯಂ ವಾಚೋ ಮನುಷ್ಯೋ ವದಂತಿ ॥

ಅಥರ್ವವೇದ ೯-೧೦-೨೭

"ವಾಕ್ ಅನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಯಿತು. ಜ್ಞಾನಿಗಳು ಇವುಗಳನ್ನು ಅರಿತಿರುತ್ತಾರೆ. ಇವುಗಳಲ್ಲಿ ಮೂರು ಗುಪ್ತವಾಗಿವೆ. ಜನಸಾಮಾನ್ಯರು ಬಳಸುವುದು ನಾಲ್ಕನೆಯದನ್ನು ಮಾತ್ರ. ಅದನ್ನು 'ವಾಚ' ಎನ್ನುತ್ತಾರೆ."

ವೇದವೆಂಬ ಶಬ್ದವು ಪವಿತ್ರ ಜ್ಞಾನವನ್ನು ಸೂಚಿಸುತ್ತದೆ. ಇದಕ್ಕೆ ಶ್ರುತಿ, ಆಮ್ನಾಯವೆಂಬ ಹೆಸರುಗಳೂ ಇವೆ. ಯಾವುದು "ಕೇಳಲ್ಪಡುವುದೋ" ಅಥವಾ "ಪ್ರಕಟಗೊಂಡಿತೋ" ಅದೇ ಶ್ರುತಿ. ಯಾವುದು ಪರಂಪರಾನುಗತವಾಗಿ ಬಂದಿದೆಯೋ ಅದೇ ಆಮ್ನಾಯ, ವೇದಗಳು ಅಪೌರುಷೇಯ ಎಂದರೆ ಅತಿಮಾನುಷವಾದವು.

ಎಲ್ಲರಿಗೂ ತಿಳಿದಿರುವಂತೆ ಭಾರತದ ಪವಿತ್ರ ವಾಙ್ಮಯಗಳೆಂದರೆ ಋಕ್, ಯಜುಸ್, ಸಾಮ ಮತ್ತು ಅಥರ್ವ ವೇದಗಳಿಗೆ ಅಂಗವಾಗಿ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್, ಜ್ಯೋತಿಷ ಮತ್ತು ಕಲ್ಪ ಎಂಬ ಶಾಸ್ತ್ರಗ್ರಂಥಗಳಿದ್ದು ಇವುಗಳನ್ನು ವೇದಾಂಗಗಳೆಂದು ಕರೆಯುತ್ತಾರೆ. ಇವುಗಳಿಗೆ ಪುರಾಣ, ನ್ಯಾಯ, ಮೀಮಾಂಸ ಮತ್ತು ಧರ್ಮಶಾಸ್ತ್ರವೆಂಬ ನಾಲ್ಕು ಅನುಬಂಧಗಳಿವೆ.

ಇದೇ ರೀತಿ ಪುರಾಣಗಳಿಗೆ ಅಂಗಗಳಾಗಿ ಉಪಪುರಾಣಗಳಿವೆ. ಹಾಗೆಯೇ ವೇದಾಂತವು ಮೀಮಾಂಸೆಯ ಅಂಗವಾಗುತ್ತದೆ. ರಾಮಾಯಣ, ಮಹಾಭಾರತ ಹಾಗೂ ಸಾಂಖ್ಯ, ಪಾತಂಜಲ, ಪಾಶುಪತ ಮತ್ತು ವೈಷ್ಣವ ಧರ್ಮಗಳು ಧರ್ಮಶಾಸ್ತ್ರದ ಭಾಗವಾಗಿವೆ. ಇವೆಲ್ಲವೂ ಒಟ್ಟುಗೂಡಿ ೧೪ ವಿದ್ಯೆಗಳಾಗುತ್ತವೆ.

ಅಂಗಾನಿ ವೇದಶ್ಚತ್ವಾರೋ ಮಿಮಾಂಸಾ ನ್ಯಾಯವಿಸ್ತರಃ ।
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥

ಇವುಗಳ ಜೊತೆಗೆ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರಗಳೆಂಬ ನಾಲ್ಕು ಉಪವೇದಗಳಿದ್ದು ಇವು ಕ್ರಮವಾಗಿ ಆಯಾ ವೇದಕ್ಕೆ ಅನುಬಂಧಗಳಾಗಿವೆ.



ವಿಷಯದೃಷ್ಟಿಕೋನದಿಂದ ವೇದಗಳನ್ನು ಕರ್ಮಕಾಂಡ ಮತ್ತು ಜ್ಞಾನಕಾಂಡವೆಂದು ಮತ್ತೊಂದು ವಿಧವಾಗಿಯೂ ವಿಂಗಡಿಸುವರು. ಕರ್ಮಕಾಂಡದ ಉದ್ದೇಶ ಸ್ವರ್ಗಪ್ರಾಪ್ತಿಯಾದರೆ ಜ್ಞಾನಕಾಂಡದ ಉದ್ದೇಶ ಅಮರತೆಯ ಸಾಧನೆ. ಗ್ರಾಂಥಿಕವಾಗಿ ವೇದಗಳನ್ನು ಮಂತ್ರ ಮತ್ತು ಬ್ರಾಹ್ಮಣಗಳೆಂದು ವಿಗಂಡಿಸಲಾಗಿದೆ. ವಿವಿಧ ದೇವತೆಗಳನ್ನು ಸುಪ್ರೀತಗೊಳಿಸಲು ಮಂತ್ರಭಾಗವನ್ನು ಬಳಸುತ್ತಾರೆ. ಬ್ರಾಹ್ಮಣಗಳು ಮಂತ್ರಭಾಗದ ವ್ಯಾಖ್ಯಾನರೂಪಗಳು.

ಮಂತ್ರಗಳು ವಿವಿಧ ರೀತಿಯವು. ಋಕ್ ಎಂಬುದು ಮೊದಲ ವಿಧ. ಇದು ವಿವಿಧ ಪಾದಗಳಿಂದ ಕೂಡಿದೆ ಅಥವಾ ಗಾಯತ್ರಿ, ಉಷ್ಣಿಕ್, ಅನುಷ್ಟುಪ್ ಇವೇ ಮುಂತಾದ ಛಂದಸ್ಸುಗಳಲ್ಲಿ ರಚಿತವಾಗಿದೆ. ಗಾಯತ್ರಿ ಛಂದಸ್ಸಿಗೆ ೨೪ ಅಕ್ಷರಗಳಿದ್ದರೆ ಉಷ್ಣಿಕ್‌ಗೆ ೨೮ ಅಕ್ಷರಗಳಿವೆ. ಹಾಗೆಯೇ ಅನುಷ್ಟುಪ್ ಛಂದಸ್ಸಿನಲ್ಲಿ ೩೨ ಅಕ್ಷರಗಳಿವೆ. ಈ ಮಂತ್ರಗಳನ್ನು ಸ್ವರಶ್ರೇಣಿಗೆ ಅಳವಡಿಸಿದಾಗ ಅವು ಸಾಮಮಂತ್ರಗಳಾಗುತ್ತವೆ. ವೇದಗಳಲ್ಲಿ ಸಂಗೀತವು ಸಪ್ತಸ್ವರಗಳಿಂದ ಕೂಡಿದೆ. ಮೂರನೆಯ ವರ್ಗಕ್ಕೆ ಸೇರಿದ ಮಂತ್ರಗಳಿವೆ. ಇವು ಮೊದಲೆರಡು ವರ್ಗದ ವ್ಯಾಪ್ತಿಗೆ ಬರುವುದಿಲ್ಲ. ಅವುಗಳನ್ನು ಯಜುರ್ಮಂತ್ರಗಳೆಂದು ಕರೆಯುತ್ತಾರೆ.

ಬ್ರಾಹ್ಮಣಗಳಲ್ಲಿ ವಿಧಿ, 'ಅರ್ಥವಾದ ಮತ್ತು ವೇದಾಂತವ್ಯಾಕಗಳೆಂದು ಮೂರು ವಿಧ. ಈ ವರ್ಗೀಕರಣವು ಅವುಗಳ ವಸ್ತುವನ್ನು ಅವಲಂಬಿಸಿದೆ. ವಿಧಿಗಳಲ್ಲಿ ಪುನಃ ಮೂರು ವಿಧ. ಮೊದಲನೆಯದು ಕರ್ಮ ಅಥವಾ ಯಜ್ಞಯಾಗಾದಿಗಳಿಗೆ ಸಂಬಂಧಿಸಿದ್ದು. ಇವುಗಳ ಫಲವನ್ನು ವಿವರಿಸುವುದು ಎರಡನೆಯ ವಿಧ. ಕರ್ಮದಲ್ಲಿ ಬಳಸುವ ಯಜ್ಞಸಾಮಗ್ರಿಗಳನ್ನು ವಿವರಿಸುವುದು ಮೂರನೆಯ ವಿಧ. ಇವೆಲ್ಲವೂ ಸೇರಿ ಒಟ್ಟಾಗಿ ಶ್ರೌತಕಲ್ಪವೆಂದು ಕರೆಯಲ್ಪಡುತ್ತದೆ.

ಬ್ರಾಹ್ಮಣಗಳ ಅಂತಿಮಭಾಗವೇ ಉಪನಿಷತ್ತುಗಳು. ಉಪನಿಷತ್ತುಗಳೊಂದಿಗೆ ಆರಣ್ಯಕಗಳನ್ನೂ ಸೇರಿಸುತ್ತಾರೆ. ನಮಗೆ ತಿಳಿದಿರುವ ಉಪನಿಷತ್ತುಗಳ ಸಂಖ್ಯೆ ಸಾಮಾನ್ಯವಾಗಿ ೧೨೧. ಆದರೆ ಇವುಗಳಲ್ಲಿ ಮುಖ್ಯವಾದವು ೧೨ ಮಾತ್ರ. ಅವೆಂದರೆ ಈಶ[1] ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ ಮತ್ತು ಕೌಶೀತಕಿ. ಇವೆಲ್ಲವೂ ಮಾನವನ ಅಂತಿಮ ಗುರಿಯ ಬಗ್ಗೆ ಚರ್ಚಿಸುತ್ತವೆ.

ಋಗ್ವೇದದ ಋಷಿಗಳು ಅಂತರ್ದೃಷ್ಟಿಯಿದ್ದ ಕವಿಗಳು. ಕಾವ್ಯಾತ್ಮಕ

---

೧. 'ಅಜ್ಞಾತಾರ್ಥಜ್ಞಾಪಕೋ ವೇದಭಾಗೋ ವಿಧಿಃ'

ಮನೋವೃತ್ತಿಯುಳ್ಳ ಅವರು ಭಾರತದ ನಾಗರಿಕತೆಯ ಬುನಾದಿಪ್ರಾಯರು. ಪರಾಕ್ರಮ ಮತ್ತು ಸಕಾರಾತ್ಮಕತೆಗಳು ಋಗ್ವೇದದ ಮುಖ್ಯಾಂಶಗಳೆಂದು ಅದರ ಆಖ್ಯಾನಗಳಿಂದ ನಮಗೆ ತೋರುತ್ತದೆ.

ಸಾಮಾನ್ಯವಾಗಿ ಯಜ್ಞಯಾಗಾದಿಗಳಲ್ಲಿ ಋಗ್ವೇದದಿಂದ ಪ್ರಯೋಗಮಂತ್ರಗಳನ್ನು' ಯಜುರ್ವೇದದಿಂದ ಅಧ್ವರ್ಯವನ್ನು ಮತ್ತು ಸಾಮವೇದದಿಂದ ಔದ್ಗಾತ್ರವನ್ನು ಸ್ವೀಕರಿಸುವುದು ವಾಡಿಕೆ.

ಋಗ್ವೇದದ ಮೂಲ ಶಬ್ದವಾದ ಋಕ್ ಎಂದರೆ ಸ್ತುತಿಯೆಂದರ್ಥ. ಋಗ್ವೇದವು ೧೦೧೭ ಮಂತ್ರಗಳಿಂದ ಕೂಡಿದ್ದು, ಇವು ವಿವಿಧ ದೇವತೆಗಳನ್ನು ಕುರಿತ ಸ್ತುತಿಗಳಾಗಿವೆ. ಹತ್ತು ಮಂಡಲಗಳಲ್ಲಿ ಕ್ರೋಡೀಕರಿಸಲಾದ ಈ ಮಂತ್ರಗಳಲ್ಲಿ ಪ್ರತಿಯೊಂದನ್ನೂ ಸೂಕ್ತವೆಂದು ಕರೆಯುತ್ತಾರೆ. ಮಂತ್ರಗಳು ವಿವಿಧ ಛಂದಸ್ಸುಗಳಲ್ಲಿವೆ. ಕೆಲವು ಮಂತ್ರಗಳಲ್ಲಿ ೨೪ ಅಕ್ಷರಗಳಿದ್ದು ಇನ್ನು ಕೆಲವಲ್ಲಿ ೧೦೪ ಅಕ್ಷರಗಳು ಇವೆ. ಪ್ರಾರಂಭದಲ್ಲಿ ಈ ವೇದವು ೨೧ ಶಾಖೆಗಳನ್ನು ಹೊಂದಿತ್ತು. ಆದರೆ ಈಗ ಉಪಲಬ್ಧವಿರುವುದು ಸಕಲ, ಬಾಷ್ಕಲ, ಆಶ್ವಲಾಯನ, ಸಾಂಖ್ಯಾಯನ, ಮಾಂಡೂಕಾಯನ ಮತ್ತು ಐತರೇಯ ಎಂಬ ೬ ಶಾಖೆಗಳು ಮಾತ್ರ.

ಹೆಸರೇ ಸೂಚಿಸುವಂತೆ ಯಜುರ್ವೇದವು ಯಜ್ಞಯಾಗಾದಿಗಳನ್ನು ಕುರಿತದ್ದು. ಇದರಲ್ಲಿ ಕೃಷ್ಣ ಯಜುರ್ವೇದ ಮತ್ತು ಶುಕ್ಲ ಯಜುರ್ವೇದಗಳೆಂಬ ವಿಂಗಡನೆಯಿದೆ. ಪ್ರಾರಂಭದಲ್ಲಿ ಕೃಷ್ಣಯಜುರ್ವೇದವು ೧೦೧ ಶಾಖೆಗಳನ್ನು ಹೊಂದಿತ್ತು. ಆದರೆ ಈಗ ಉಪಲಬ್ಧವಿರುವುದು ತೈತ್ತಿರೀಯ, ಕಾಠಕ, ಮೈತ್ರಾಯಣಿ ಮತ್ತು ಕಪಿಸ್ಥಲವೆಂಬ ಶಾಖೆಗಳು ಮಾತ್ರ. ಹಾಗೆಯೇ ಪ್ರಾರಂಭದಲ್ಲಿ ಶುಕ್ಲಯಜುರ್ವೇದವು ಹದಿನೇಳು ಶಾಖೆಗಳನ್ನು ಹೊಂದಿದ್ದು ಈಗ ಉಪಲಬ್ಧವಿರುವುದು ಮಾಧ್ಯಂದಿನ ಮತ್ತು ಕಣ್ವ ಶಾಖೆಗಳು ಮಾತ್ರ. ಕೃಷ್ಣಯಜುರ್ವೇದಕ್ಕೂ ಮತ್ತು ಶುಕ್ಲಯಜುರ್ವೇದಕ್ಕೂ ಇರುವ ವ್ಯತ್ಯಾಸವೆಂದರೆ ಕೃಷ್ಣಯಜುರ್ವೇದವು ಮೂಲತಃ ವಿವರಣಾತ್ಮಕ. ಆದರೆ ಶುಕ್ಲಯಜುರ್ವೇದದಲ್ಲಿ ಮಂತ್ರಗಳು ಮಾತ್ರವೇ ಇರುವುದು. ಆದರೆ ಇಲ್ಲಿ ಕೆಲವು ಗದ್ಯಾತ್ಮಕ ಸಾಲುಗಳೂ ಇವೆ.

ಸಾಮವೇದದ ವಿಷಯ ಯಜ್ಞಯಾಗಾದಿಗಳಿಗೆ ಸಂಬಂಧಿಸಿದ್ದರೂ ಅದು ಅಪ್ಪಟ ಕಾವ್ಯಾತ್ಮಕ. ಇದರ ಸ್ವಲ್ಪಭಾಗವು ಮಾತ್ರ ತನ್ನದೇ ಆದ ವಿಷಯವನ್ನು ಹೊಂದಿರುವುದು. ಉಳಿದೆಲ್ಲ ಭಾಗಗಳನ್ನು ಅದು ಋಗ್ವೇದದಿಂದಲೇ ಪಡೆದು ಕೊಂಡದ್ದು. ಯಜ್ಞಾಚರಣೆಯ ದೃಷ್ಟಿಯಿಂದ ಇವುಗಳಲ್ಲಿ ಒಗ್ಗೂಡಿಸಲಾಗಿದ್ದು ಯಜ್ಞಾಚರಣೆಯ ಸಂದರ್ಭದಲ್ಲಿ ಇವುಗಳನ್ನು ನಿರ್ದಿಷ್ಟ ಸ್ವರಗಳಲ್ಲಿ ಹಾಡಲಾಗುತ್ತದೆ. ಸಾಮವೇದದಲ್ಲಿ ಪೂರ್ವಾರ್ಚಿಕಾ ಮತ್ತು ಉತ್ತರಾರ್ಚಿಕಾ ಎಂಬ ಎರಡು ಭಾಗಗಳುಂಟು. ಗೌತಮ ಮತ್ತು ಜೈಮಿನೀಯ ಎಂಬ ಇತರ ಶಾಖೆಗಳೂ



ಇದರಲ್ಲಿ ಪ್ರಮುಖವಾದವು.

ಅಥರ್ವವೇದವು ಬಹುತೇಕ ಶಾಂತಿಕ, ಪೌಷ್ಟಿಕ ಮತ್ತು ಅಭಿಚಾರಕ ವಿದ್ಯೆಗಳಿಗೆ ಸಂಬಂಧಿಸಿದ್ದು. ಇದರ ವಿಧಿಗಳನ್ನು ರೋಗನಿವಾರಣೆ, ಧನಪ್ರಾಪ್ತಿಯೇ ಮುಂತಾದ ಉದ್ದೇಶಗಳಿಗೆ ಬಳಸುತ್ತಾರೆ. ಎಂದರೆ ಈ ವೇದವು ಲೌಕಿಕ ಬದುಕಿನಲ್ಲಿ ಹೇಗೆ ಒಬ್ಬ ನಿರ್ದಿಷ್ಟ ಉದ್ದೇಶವನ್ನು ಸಾಧಿಸಬಹುದೆಂಬುದನ್ನು ವಿವರಿಸುತ್ತದೆ. ಇದರಲ್ಲಿ ಕೆಲವು ಸಾಲುಗಳು ಮನೋಜ್ಞ, ತಾತ್ತ್ವಿಕ ಹಾಗೂ ಕಾವ್ಯಾತ್ಮಕವಾಗಿವೆ. ಸುಮಾರು ೬೦೦೦ ಶ್ಲೋಕಗಳಿರುವ ಈ ವೇದದಲ್ಲಿ ೭೩೧ ಸೂಕ್ತಗಳಿವೆ. ಈ ಸೂಕ್ತಗಳನ್ನು ಪುನಃ ೨೦ ಪುಸ್ತಕಗಳನ್ನಾಗಿ ವಿಂಗಡಿಸಲಾಗಿದೆ. ಪ್ರಾರಂಭದಲ್ಲಿ ಈ ವೇದದಲ್ಲಿ ೯ ಶಾಖೆಗಳಿದ್ದವು. ಆದರೆ ಈಗ ಪೈಪ್ಪಲಾದ ಮತ್ತು ಶೌನಕ ಶಾಖೆಗಳು ಮಾತ್ರ ಉಪಲಬ್ಧ.

ವೇದವನ್ನು ಕುರಿತ ಗಾಢವಾದ ನಂಬಿಕೆಯೆಂದರೆ ವೇದವ್ಯಾಸರು ನಾಲ್ಕು ವೇದಗಳನ್ನು ಕ್ರೋಡೀಕರಿಸಿ ಅವುಗಳನ್ನು ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತ ಎಂಬ ನಾಲ್ಕು ಶಿಷ್ಯರಿಗೆ ಬೋಧಿಸಿದರು. ಈ ಶಿಷ್ಯರು ಗುರುಗಳಿಂದ ಪಡೆದುಕೊಂಡ ಜ್ಞಾನವನ್ನು ತಮ್ಮ ಶಿಷ್ಯರಿಗೆ ಬೋಧಿಸಿದರು. ಹೀಗೆ ವೇದಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಪರಂಪರಾನುಗತವಾಗಿ ಹರಿದುಬಂದವು. ಕ್ರಮೇಣ ವೇದಗಳು ಪ್ರಪಂಚಾದ್ಯಂತ ಪ್ರಚಾರಗೊಂಡವು. ಭೂಗೋಳ ಮತ್ತು ಪರಿಸರಕ್ಕೆ ಅನುಗುಣವಾಗಿ ಉಚ್ಚಾರಣೆ ಮತ್ತು ಪದವಿನ್ಯಾಸಗಳಲ್ಲಿ ಕೆಲವು ವೈಲಕ್ಷಣ್ಯಗಳು ಸಣ್ಣ ಸಣ್ಣ ವ್ಯತ್ಯಾಸಗಳು ಕಂಡುಬಂದು ಇದು ವಿವಿಧ ಶಾಖೆಗಳ ಉಗಮಕ್ಕೆ ಕಾರಣವಾಯಿತು. ಹೀಗಿದ್ದರೂ ವೇದದ ವಿಷಯದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.

ಪ್ರತಿಯೊಂದು ಶಾಖೆಯೂ ಪೂರ್ಣವೆನಿಸಿಕೊಳ್ಳಬೇಕಿದ್ದರೆ ಆಯಾ ಸಂಹಿತೆ, ಉಪನಿಷತ್ತುಗಳು, ಸೂತ್ರಗಳು ಮತ್ತು ಆರಣ್ಯಕಗಳೆಂಬ ಪೂರಕಗಳನ್ನು (Complements) ಹೊಂದಿರಬೇಕಾಗುತ್ತದೆ (ಕೊನೆಯ ಪುಟದ ಪಟ್ಟಿಯನ್ನು ನೋಡಿ).

ವೇದವನ್ನು ಮೂಲ, ಪದ, ಕ್ರಮ, ಜಟಾ ಮತ್ತು ಘನ ಎಂಬ ಐದು ರೀತಿಯಲ್ಲಿ ಪಠಿಸಬೇಕು. ಮೊದಲ ವಿಧಾನದಲ್ಲಿ ಮಂತ್ರಗಳನ್ನು ನಿರಂತರವಾಗಿ ಉಚ್ಚರಿಸಲಾಗುತ್ತದೆ. ಎರಡನೇ ವಿಧಾನದಲ್ಲಿ ಮಂತ್ರಗಳ ಪ್ರತಿಯೊಂದು ಪದವನ್ನೂ ಛೇದಿಸಿ ಉಚ್ಚರಿಸಲಾಗುತ್ತದೆ. ಮೂರನೆಯ ವಿಧಾನದಲ್ಲಿ ಪದಗಳನ್ನು ೧.೨, ೨.೩, ೩.೪ ಇತ್ಯಾದಿ ಕ್ರಮದಲ್ಲಿ ಸೇರಿಸಿಕೊಂಡು ಉಚ್ಚರಿಸಲಾಗುತ್ತದೆ. ನಾಲ್ಕನೇ ವಿಧಾನದಲ್ಲಿ ಪದಗಳನ್ನು ಗ್ರಾಂಥಿಕ ಕ್ರಮದಲ್ಲಿ ಸೇರಿಸಲಾಗುತ್ತದೆ. ನಂತರ ಅವುಗಳನ್ನು ಹಿಂದುಮುಂದಾಗಿ ಉಚ್ಚರಿಸಲಾಗುತ್ತದೆ. ಆ ನಂತರ ಪುನಃ ಗ್ರಾಂಥಿಕ ಕ್ರಮದಲ್ಲಿ

ಅವುಗಳನ್ನು ಎಂದಿನ ರೀತಿಯಲ್ಲಿ ಸೇರಿಸಿ ಉಚ್ಚರಿಸಲಾಗುತ್ತದೆ. ಇದನ್ನು ಹೀಗೆ ತೋರಿಸಬಹುದು : ೧.೨, ೨.೧, ೧.೨, ೨.೩, ೩.೨, ೨.೩, ೩.೪ ಇತ್ಯಾದಿ. ಕೊನೆಯದು ಅತ್ಯಂತ ಸಂಕೀರ್ಣ ಸಂಯೋಜನೆ. ಇಲ್ಲಿ ಕ್ರಮ ಈ ರೀತಿಯದು : ೧.೨.೨.೧, ೧.೨.೩.೩.೨.೧, ೧.೨.೩, ಇತ್ಯಾದಿ

* * * *



## ೨. ವೇದಾಂಗಗಳು

ವೇದಾಂಗಗಳು ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ್ಯ. ಮೂಲತಃ ವೇದಕ್ಕೆ ನಿಕಟವಾಗಿ ಸಂಬಂಧಿಸಿದ್ದರೂ ವೇದಾಂಗ ಶಬ್ದವು ಅದರ ವಿಷಯಗಳು ಮನುಷ್ಯ ಮೂಲವನ್ನು ಹೊಂದಿದೆಯೆಂಬುದನ್ನು ಸೂಚಿಸುತ್ತದೆ. ವೇದಗಳ ಅವಯವಗಳೇ ವೇದಾಂಗಗಳು.

ವೇದಾಂಗಗಳಲ್ಲಿ ಮೊದಲನೆಯದು ಶಿಕ್ಷಾ. ಪಾಣಿನಿ ಮಹರ್ಷಿಯು ಈ ಶಾಖೆಯ ಕರ್ತೃವೆಂದು ಹೇಳಲಾಗಿದೆ. ಅದು ವೇದಸ್ವರಗಳನ್ನು ಯಾವ ರೀತಿ ಉಚ್ಚರಿಸಬೇಕೆಂಬುದನ್ನು ವಿವರಿಸುತ್ತದೆ. ಅದು ವೇದಗಳಲ್ಲಿ ಕಾಣಬರುವ ಸ್ವರ ವ್ಯಂಜನಗಳ ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯ, ಹ್ರಸ್ವ, ದೀರ್ಘ, ಪ್ಲುತ ಇತ್ಯಾದಿ ಸ್ವರಸ್ಥಾಯಿಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಮಂತ್ರ ಬಳಕೆಯ ಸಂದರ್ಭದಲ್ಲಿ ಈ ಶಾಸ್ತ್ರಜ್ಞಾನವು ಅತ್ಯಂತ ಆವಶ್ಯಕ. ಮಂತ್ರಗಳ ದೋಷಪೂರಿತ ಉಚ್ಚಾರಣೆಯು ಅಪಾಯಕಾರಿ ಪರಿಣಾಮಗಳನ್ನು ನೀಡುತ್ತದೆ. ಈ ವೇದಾಂತವು ನಾಲ್ಕು ವೇದಗಳಿಗೂ ಸಮ.

ನಂತರ ಬರುವುದು ವ್ಯಾಕರಣ ಶಾಸ್ತ್ರ. ಈ ಶಾಸ್ತ್ರವನ್ನೂ ಪಾಣಿನಿಯೇ ಮಹೇಶ್ವರನ ಅನುಗ್ರಹದಿಂದ ಸೂತ್ರರೂಪದಲ್ಲಿ ಬರೆದನೆಂದು ಪ್ರತೀತಿ. ಅದು ವೈದಿಕ ಶಬ್ದಗಳ ಸರಿಯಾದ ಬಳಕೆಯನ್ನಷ್ಟೇ ಅಲ್ಲ, ವ್ಯಾಕರಣನಿಯಮಗಳನ್ನೂ ವಿಸ್ತಾರವಾಗಿ ಚರ್ಚಿಸುತ್ತದೆ. ಇದರಲ್ಲಿ ಎಂಟು ಅಧ್ಯಾಯಗಳು ಮತ್ತು ೩೯೭೮ ಸೂತ್ರಗಳಿವೆ. ಈ ಕಾರಣದಿಂದಲೇ ಇದನ್ನು ಅಷ್ಟಾಧ್ಯಾಯಿ ಎಂದು ಕರೆಯುವುದು. ಕಾತ್ಯಾಯನ ಮುನಿಯು ಪಾಣಿನಿಸೂತ್ರಗಳಿಗೆ ವಾರ್ತಿಕ ಎಂಬ ಛಂದೋಬದ್ಧ ವ್ಯಾಖ್ಯಾನವನ್ನು ರಚಿಸಿದ. ಪತಂಜಲಿ ಮಹರ್ಷಿಗಳು ಈ ವಾರ್ತಿಕಕ್ಕೆ ಮಹಾಭಾಷ್ಯವೆಂಬ ಮತ್ತೊಂದು ವ್ಯಾಖ್ಯಾನವನ್ನು ಬರೆದಿದ್ದಾರೆ. ಈ ವೈದಿಕ ವ್ಯಾಕರಣವಲ್ಲದೆ ಮಹಾವ್ಯಾಕರಣ, ಐಂದ್ರ, ಚಂದ್ರ, ಶಕಟಾಯನ, ಸ್ಫೋಟಾಯನ, ಪೌಷ್ಕರ, ಸಾರಸ್ವತ, ಕೌಮಾರ ಇತ್ಯಾದಿ ಇತರ ವ್ಯಾಕರಣಗಳ ಉಲ್ಲೇಖವೂ ಇದೆ. ಇವುಗಳ ಜೊತೆಗೆ ಪ್ರಾಕೃತಭಾಷೆಯಲ್ಲೂ ವ್ಯಾಕರಣ ಗ್ರಂಥಗಳಿವೆ.

ಮುಂದಿನ ವೇದಾಂಗವೆಂದರೆ ನಿರುಕ್ತ. ಯಾಸ್ಕರು ಈ ಶಾಸ್ತ್ರದ ಕರ್ತೃಗಳು.

ಇದು ವೇದಮಂತ್ರಗಳ ಶಬ್ದಗಳ ವ್ಯುತ್ಪತ್ತಿಯನ್ನು ನೀಡುತ್ತದೆ. ಈ ವ್ಯುತ್ಪತ್ತಿಯು ಪ್ರಾಯೋಗಿಕವಾಗಿ ಬಹಳ ಉಪಯುಕ್ತ ವೇದಗಳನ್ನು ಅರ್ಥಮಾಡಿಕೊಳ್ಳಲು ನಿರುಕ್ತದ ಜ್ಞಾನವು ಅತ್ಯಂತ ಆವಶ್ಯಕ. ಈ ವೈದಿಕ ನಿಘಂಟುವಿನಲ್ಲಿ ೮ ಅಧ್ಯಾಯಗಳಿವೆ. ನಾಮ, ಆಖ್ಯಾತ, ನಿಪಾತ ಮತ್ತು ಉಪಸರ್ಗವೆಂದು ನಾಲ್ಕು ವರ್ಗಗಳಾಗಿ ವಿಂಗಡಿಸುವ ಮೂಲಕ ವೇದಶಬ್ದಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ. ಜೊತೆಗೆ ಈ ಕೃತಿಯಲ್ಲಿ ೫ ಅಧ್ಯಾಯಗಳ ನಿಘಂಟುವನ್ನೂ ಸೇರಿಸಲಾಗಿದೆ.

ವೇದಮಂತ್ರಗಳ ಛಂದಸ್ಸನ್ನು ಕುರಿತು ಚರ್ಚಿಸುವ ಶಾಸ್ತ್ರಕ್ಕೆ ಛಂದಶ್ಶಾಸ್ತ್ರವೆಂದು ಹೆಸರು. ಈ ಶಾಸ್ತ್ರವನ್ನು ಕುರಿತು ಪಿಂಗಳನೆಂಬಾತನು ಛಂದೋವಿಚ್ಛಿತ್ತಿ ಎಂಬ ಗ್ರಂಥವನ್ನು ಬರೆದನೆಂದು ಹೇಳಲಾಗಿದೆ. ಇದರಲ್ಲಿ ೮ ಅಧ್ಯಾಯಗಳಿವೆ. ಇದರಲ್ಲಿ ಮೂರು ಅಧ್ಯಾಯಗಳು ವೈದಿಕ ಛಂದಸ್ಸುಗಳನ್ನು ಮತ್ತು ಉಳಿದ ಐದು ಅಧ್ಯಾಯಗಳು ಲೌಕಿಕ ಕೃತಿಗಳ ಛಂದಸ್ಸುಗಳನ್ನು ವಿವರಿಸುತ್ತವೆ.

ಮುಂದಿನ ವೇದಾಂಗವೆಂದರೆ ಜ್ಯೋತಿಷ. ವೈದಿಕ ಕರ್ಮಗಳನ್ನು ಸಂವತ್ಸರದ ಹುಣ್ಣಿಮೆ, ಅಮಾವಾಸ್ಯೆಗಳಂತಹ ನಿರ್ದಿಷ್ಟ ಕಾಲ ಮತ್ತು ಋತುಗಳಲ್ಲಿ ಆಚರಿಸಬೇಕಾದ್ದರಿಂದ ಜ್ಯೋತಿಷ ಶಾಸ್ತ್ರದ ಜ್ಞಾನವು ಆವಶ್ಯಕವಾಯಿತು. ಸೂರ್ಯದೇವನು ಈ ಶಾಸ್ತ್ರದ ಮೂಲಕರ್ತೃವೆಂದು ಹೇಳಲಾಗಿದೆ. ಅನಂತರ ಗಾರ್ಗಋಷಿಯೇ ಮುಂತಾದವರು ಈ ಶಾಸ್ತ್ರವನ್ನು ವಿವರಿಸಿದರು. ಇಲ್ಲಿ ಜ್ಯೋತಿಷವೆಂದರೆ ಖಗೋಳಶಾಸ್ತ್ರ ಮತ್ತು ಜ್ಯೋತಿಷ ಇವೆರಡನ್ನೂ ಒಳಗೊಂಡಿರುತ್ತದೆ.

ವೇದಾಂಗಗಳಲ್ಲಿ ಮುಂದಿನದು ಕಲ್ಪ. ವಿವಿಧ ವೇದಶಾಖೆಗಳ ಅನುಚರರು ವೈದಿಕ ಕರ್ಮಗಳನ್ನು ವಿವಿಧ ರೀತಿಯಲ್ಲಿ ಆಚರಿಸಬೇಕಿತ್ತು. ಈ ಕಾರಣದಿಂದ ಕಲ್ಪಶಾಸ್ತ್ರವು ಉಗಮವಾಯಿತು. ಈ ವಿವಿಧ ಶಾಖೆಗಳ ಆಚರಣೆಗಳಲ್ಲಿ ಕಾಣಬರುವ ಸಣ್ಣಪುಟ್ಟ ವ್ಯತ್ಯಾಸಗಳನ್ನು ವಿವರಿಸುವ ಹೊಣೆಗಾರಿಕೆ ಕಲ್ಪಸೂತ್ರಗಳ ಮೇಲೆ ಬಿತ್ತು.

ಕಲ್ಪವು ಮೂರು ವಿಧ. ಮಂತ್ರಗಳನ್ನು ಯಾವ ರೀತಿ ಬಳಸಲಾಗಿದೆ ಎಂಬುದರ ಆಧಾರದ ಮೇಲೆ ಈ ಪ್ರಭೇದವನ್ನು ಮಾಡಲಾಗಿದೆ. ಉದಾಹರಣೆಗೆ ಆಶ್ವಲಾಯನ ಮತ್ತು ಸಾಂಖ್ಯಾಯನ ಋಷಿಗಳು ಹೋತೃಪ್ರಯೋಗಕ್ಕೆ (ಯಜ್ಞಾಚರಣೆಗೆ) ಸಂಬಂಧಿಸಿದಂತೆ ಸೂತ್ರಗಳನ್ನು ರಚಿಸಿದ್ದಾರೆ. ಹಾಗೆಯೇ ಬೌಧಾಯನ, ಆಪಸ್ತಂಬ ಮತ್ತು ಕಾತ್ಯಾಯನರು ಅಧ್ವರ್ಯು ಪ್ರಯೋಗಕ್ಕೆ ಸಂಬಂಧಿಸಿದಂತೆ ಸೂತ್ರಗಳನ್ನು ರಚಿಸಿದ್ದಾರೆ. ಹಾಗೆಯೇ ಲಾಕ್ಯಾಯನ ಮತ್ತು ವ್ರೀಹ್ಯಾಯನ ಋಷಿಗಳು ಔದ್ಗಾತ್ರ (ಸಂಗೀತ) ಪ್ರಯೋಗಕ್ಕೆ ಸಂಬಂಧಿಸಿದಂತೆ ಸೂತ್ರಗಳನ್ನು ರಚಿಸಿದ್ದಾರೆ.



ಈ ಗ್ರಂಥಗಳಲ್ಲದೆ ವೇದಗಳನ್ನು ಆಧರಿಸಿದ ಪ್ರಾತಿಶಾಖ್ಯ ಎಂಬ ಕೆಲವು ವಿಶೇಷ ಗ್ರಂಥಗಳಿವೆ. ಇವು ನಿರ್ದಿಷ್ಟ ವೇದವನ್ನು ಶಿಕ್ಷಾ, ವ್ಯಾಕರಣ ಇತ್ಯಾದಿಗಳಿಗೆ ಅನುಸಾರವಾಗಿ ಯಾವ ರೀತಿ ಉಚ್ಚರಿಸಬೇಕೆಂಬುದುನ್ನು ವಿವರಿಸುತ್ತವೆ. ಇವುಗಳನ್ನು ಕೈಪಿಡಿಯೆಂದು ನಾವು ಕರೆಯಬಹುದು. ಇವು ಈಗಾಗಲೇ ತಿಳಿಸಲಾಗಿರುವ ಗ್ರಂಥಗಳಿಗಿಂತಲೂ ಭಿನ್ನ. ಉದಾಹರಣೆಗೆ ಮೊದಲ ಮೂರು ವೇದಗಳ ಪ್ರತಿಯೊಂದು ವೇದಕ್ಕೂ ತನ್ನದೇ ಆದ ಪ್ರತಿಶಾಖ್ಯವಿದೆ. ಇವುಗಳನ್ನು ಶೌನಕ, ಕಾತ್ಯಾಯನರೇ ಮುಂತಾದವರು ರಚಿಸಿದ್ದಾರೆ.

ವೇದಗಳನ್ನು ಕುರಿತಂತೆ ಅನುಕ್ರಮಣಿಕಾ ಎಂಬ ಮತ್ತೊಂದು ವಿಧವಾದ ಗ್ರಂಥವೂ ಇದೆ. ಇದು ವೇದಗಳ ವಿವಿಧ ಭಾಗಗಳಲ್ಲಿ ಬರುವ ದೇವತೆಗಳು, ಛಂದಸ್ಸುಗಳು ಇವೇ ಮುಂತಾದವುಗಳ ಪಟ್ಟಿಯನ್ನು ನೀಡುತ್ತವೆ.

ನಿರುಕ್ತವಲ್ಲದೆ ವೇದಗಳಿಗೆ ಸಂಬಂಧಿಸಿದ ಪದಕೋಶಗಳೂ ಇವೆ. ಇವು ವೇದಮಂತ್ರಗಳ ವಿವರಣೆಗೆ ಬಹಳ ಉಪಯುಕ್ತವಾಗಿವೆ.

ಹೀಗೆ ವೇದವಿಧಾನವನ್ನು ಕುರಿತಂತೆ ನಮ್ಮಲ್ಲಿ ವಿಸ್ತಾರವಾದ ಸಾಹಿತ್ಯವಿದೆ.

ವೇದಗಳಿಗೆ ಎರಡು ಪ್ರಸಿದ್ಧ ವ್ಯಾಖ್ಯಾನಗಳುಂಟು. ಇವುಗಳನ್ನು ಸಾಯಣಾಚಾರ್ಯ ಮತ್ತು ಭಟ್ಟಭಾಸ್ಕರರು ರಚಿಸಿದ್ದಾರೆ. ಶ್ರೀ ಶಂಕರರು, ಶ್ರೀ ಮಧ್ವರೇ ಮುಂತಾದ ಮಹಾಚಾರ್ಯರುಗಳು ವೇದದ ಭಾಗವಾದ ಮುಖ್ಯ ಉಪನಿಷತ್ತುಗಳಿಗೆ ವ್ಯಾಖ್ಯಾನಗಳನ್ನು ರಚಿಸಿದ್ದಾರೆ.

ನಾಲ್ಕು ವೇದಗಳಿಗೆ ನಾಲ್ಕು ಅಭಿಮಾನಿ ಗ್ರಹಗಳನ್ನು ಗುರುತಿಸುತ್ತಾರೆ. ಋಗ್ವೇದಕ್ಕೆ ಗುರು, ಯಜುರ್ವೇದಕ್ಕೆ ಶುಕ್ರ, ಸಾಮವೇದಕ್ಕೆ ಮಂಗಳ ಮತ್ತು ಅಥರ್ವವೇದಕ್ಕೆ ಬುಧರು ಅಭಿಮಾನಿ ಗ್ರಹಗಳು.

**ಪುರಾಣಗಳು**

ಉಪಾಂಗಗಳಲ್ಲಿ ಮೊದಲು ಬರುವುದು ಪುರಾಣಗಳು. ಪುರಾಣಗಳಿಗೆ ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತಗಳೆಂಬ ಐದು ಮುಖ್ಯ ಲಕ್ಷಣಗಳಿರಬೇಕೆಂದು ಹೇಳುತ್ತಾರೆ. ಇವು ಸಂಖ್ಯೆಯಲ್ಲಿ ಹದಿನೆಂಟು. ಯಾವುವೆಂದರೆ ಬ್ರಹ್ಮ (೧೦,೦೦೦ ಶ್ಲೋಕಗಳು), ಪದ್ಮ (೫೫,೦೦೦), ವಿಷ್ಣು (೨೩,೦೦೦), ಶಿವ (೨೪,೦೦೦), ಭಾಗವತ (೧೮,೦೦೦), ಲಿಂಗ (೧೧,೦೦೦), ವರಾಹ (೨೪,೦೦೦), ನಾರದೀಯ (೨೫,೦೦೦), ಮಾರ್ಕಂಡೇಯ (೯,೦೦೦), ಅಗ್ನಿ (೧೫,೪೦೦), ಭವಿಷ್ಯ (೧೪,೫೦೦), ಬ್ರಹ್ಮವೈವರ್ತ (೧೮,೦೦೦), ಸ್ಕಾಂದ (೮೧,೧೦೦), ವಾಮನ (೧೦,೦೦೦), ಕೂರ್ಮ (೧೭,೦೦೦), ಮತ್ಸ್ಯ (೧೪,೦೦೦) ಗರುಡ(೧೯,೦೦೦) ಮತ್ತು ಬ್ರಹ್ಮಾಂಡ (೧೨,೦೦೦).

ಈ ಪುರಾಣಗಳನ್ನು ಬರೆದ ಖ್ಯಾತಿ ಬಾದರಾಯಣ ಋಷಿಗಳಿಗೆ ಸಲ್ಲುತ್ತದೆ. ಇವರನ್ನು ವ್ಯಾಸರೆಂದೂ ಕರೆಯುತ್ತಾರೆ.

**ಉಪಪುರಾಣಗಳು**

ಉಪಪುರಾಣಗಳು ಸಂಖ್ಯೆಯಲ್ಲಿ ಹದಿನೆಂಟು. ಯಾವುವೆಂದರೆ ಸನತ್‌ಕುಮಾರ, ನರಸಿಂಹ, ನಂದಿಕೇಶ್ವರ, ಶಿವಧರ್ಮ, ದೂರ್ವಾಸ, ನಾರದ, ಕಪಿಲ, ಮಾನವ, ಉಷಾನಸ, ಬ್ರಹ್ಮ, ವರುಣ, ಕಲಿ, ವಸಿಷ್ಠ, ಲಿಂಗ, ಸಾಂಬ, ಸೌರ, ಪರಾಶರ, ಮಾರೀಚ ಮತ್ತು ಗಾರ್ಗ.

**ನ್ಯಾಯ**

ಉಪಾಂಗಗಳಲ್ಲಿ ಮುಂದಿನದು ನ್ಯಾಯಶಾಸ್ತ್ರ ಅಥವಾ ತರ್ಕಶಾಸ್ತ್ರ. ಇದನ್ನು ಬರೆದವರು ಗೌತಮ ಋಷಿಗಳು. ಇದು ೫೩೭ ಸೂತ್ರಗಳನ್ನು, ಐದು ಅಧ್ಯಾಯಗಳನ್ನು ಹೊಂದಿದೆ. ಪ್ರಮಾಣ ಮತ್ತು ಪ್ರಮೇಯವೇ ಮುಂತಾದ ಜ್ಞಾನಮೀಮಾಂಸೆಯ ವಿವಿಧ ವಿಷಯಗಳನ್ನು ಕುರಿತ ಆಳವಾದ ಜ್ಞಾನವನ್ನು ಹೊಂದುವಲ್ಲಿ ಈ ಶಾಸ್ತ್ರವು ನಮಗೆ ನೆರವಾಗುತ್ತದೆ. ಅದು ಅರಿವಿನಲ್ಲಿ ಮಾನಸಿಕ ಪ್ರಕ್ರಿಯೆಯೇನೆಂಬುದನ್ನು ವಿಶ್ಲೇಷಿಸುತ್ತದೆ. ವಾತ್ಸ್ಯಾಯನ ಎಂಬುವರು ನ್ಯಾಯಶಾಸ್ತ್ರದ ವ್ಯಾಖ್ಯಾನಕಾರರು.

**ವೈಶೇಷಿಕ**

ಇದು ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಮತ್ತೊಂದು ಶಾಸ್ತ್ರ. ವೈಶೇಷಿಕ ಶಾಸ್ತ್ರವನ್ನು ಬರೆದವರು ಮಹರ್ಷಿ ಕಣಾದರು. ಇದು ೩೭೩ ಸೂತ್ರಗಳನ್ನು ೧೨ ಅಧ್ಯಾಯಗಳಲ್ಲಿ ಹೊಂದಿದೆ. ಈ ಶಾಸ್ತ್ರವು ದ್ರವ್ಯ, ಗುಣ, ಕರ್ಮವೇ ಮುಂತಾದ ಆರು ಪದಾರ್ಥಗಳ ಸ್ಪಷ್ಟಜ್ಞಾನವನ್ನು ನೀಡುವಲ್ಲಿ ನಮಗೆ ನೆರವಾಗುತ್ತದೆ. ನ್ಯಾಯ ಮತ್ತು ವೈಶೇಷಿಕ ಈ ಎರಡೂ ದರ್ಶನಗಳ ಭೌತಾತೀತ ಮತ್ತು ತರ್ಕಶಾಸ್ತ್ರಗಳೆರಡೂ ಹೆಚ್ಚುಕಡಿಮೆ ಒಂದೇ ಆಗಿವೆ. ಈ ಶಾಸ್ತ್ರವು ವೇದಪ್ರಾಮಾಣ್ಯವನ್ನು ಅಂಗೀಕರಿಸುತ್ತದೆ.

**ಮೀಮಾಂಸಾ**

ವೇದಾಂಗಗಳ ಪಟ್ಟಿಯಲ್ಲಿ ಮೂರನೆಯದು ಮೀಮಾಂಸಾ ಶಾಸ್ತ್ರ. ಇದು ಎರಡು ರೀತಿಯದು. ಒಂದು ಕರ್ಮ ಅಥವಾ ಪೂರ್ವ ಮೀಮಾಂಸಾ, ಮತ್ತೊಂದು ಶಾರೀರಿಕ ಅಥವಾ ಉತ್ತರ ಮೀಮಾಂಸಾ. ಉತ್ತರ ಮೀಮಾಂಸೆಯನ್ನು ವೇದಾಂತ ಎಂದೂ ಕರೆಯುತ್ತಾರೆ. ಪೂರ್ವ ಮೀಮಾಂಸೆಯನ್ನು ಜೈಮಿನಿ ಋಷಿಗಳು ಬರೆದರು. ೧೨ ಅಧ್ಯಾಯಗಳುಳ್ಳ ಈ ಶಾಸ್ತ್ರಕ್ಕೆ ಶಬರ ಸ್ವಾಮಿನ್ ಎಂಬುವರು ವ್ಯಾಖ್ಯಾನವನ್ನು ಬರೆದಿದ್ದಾರೆ. ಜೈಮಿನಿ ಋಷಿಗಳು ಉಪಾಸನಾ ಕಾಂಡ ಎಂಬ ಗ್ರಂಥವನ್ನೂ ಬರೆದಿದ್ದಾರೆ. ಇದರಲ್ಲಿ ೪ ಅಧ್ಯಾಯಗಳಿವೆ.



**ಬ್ರಹ್ಮಸೂತ್ರ**

ಮೀಮಾಂಸೆಯ ಮತ್ತೊಂದು ವಿಧವನ್ನು ವೇದಾಂತ ಎಂದೂ ಕರೆಯುತ್ತಾರೆಂದು ಈಗಾಗಲೇ ಹೇಳಿದೆ. ಇದಕ್ಕೆ ಆಧಾರಗ್ರಂಥ ಬ್ರಹ್ಮಸೂತ್ರ. ೪ ಅಧ್ಯಾಯಗಳಿರುವ ಈ ಗ್ರಂಥವನ್ನು ಬಾದರಾಯಣರು ಅಥವಾ ವ್ಯಾಸ ಋಷಿಗಳು ಬರೆದರೆಂದು ಪ್ರತೀತಿ. ಇದರ ಮೊದಲ ಸೂತ್ರ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬುದು. ಶಂಕರ, ರಾಮಾನುಜ ಮತ್ತು ಮಧ್ವ ಈ ಮೂರು ಮುಖ್ಯ ಆಚಾರ್ಯರುಗಳು ಬ್ರಹ್ಮಸೂತ್ರದ ಮೇಲೆ ವ್ಯಾಖ್ಯಾನವನ್ನು, ರಚಿಸಿದ್ದಾರೆ. ಉತ್ತರ ಮೀಮಾಂಸೆಯ ಉದ್ದೇಶವು ಜೀವ ಬ್ರಹ್ಮರ ಏಕತೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ವಿಧಾನವನ್ನು ನಿರೂಪಿಸುವುದು. ಪೂರ್ವಮೀಮಾಂಸೆಯ ಪ್ರಕಾರ ಪ್ರಪಂಚವು ನಿರಂತರವಾಗಿ ಚಲನಶೀಲವಾಗಿದೆ. ಆದರೆ ಉತ್ತರ ಮೀಮಾಂಸೆಯ ಪ್ರಕಾರ ಈ ಜಗತ್ತು ತೋರ್ಪಡಿಕೆಯದು.

**ಸಾಂಖ್ಯ**

ಈ ಸಂದರ್ಭದಲ್ಲಿ ನಾವಿಲ್ಲಿ ಸಾಂಖ್ಯದರ್ಶನವನ್ನು ಕುರಿತು ಪ್ರಸ್ತಾಪಿಸಬೇಕಾಗುತ್ತದೆ. ಸಾಂಖ್ಯಶಾಸ್ತ್ರದಲ್ಲಿ ೬ ಅಧ್ಯಾಯಗಳಿವೆ. ಇದನ್ನು ಕಪಿಲ ಋಷಿಗಳು ಬರೆದರೆಂದು ಪ್ರತೀತಿ. ಕಪಿಲರ ಪ್ರಕಾರ ಈ ಪ್ರಪಂಚವು ನಿಜ. ಅದು ಬುದ್ಧಿ, ಚಲನಶೀಲತೆ ಮತ್ತು ಪ್ರಕೃತಿಗಳಿಂದ ಸಮತೋಲನಗೊಂಡಿದೆ. ಈ ಶಾಸ್ತ್ರದ ಪ್ರಕಾರ ಜೀವನದ ಗುರಿಯು ತಾಪತ್ರಯಗಳಿಂದ ಶಾಶ್ವತ ಮುಕ್ತಿಯನ್ನು ಪಡೆಯುವುದು. ಇದು ಪ್ರಕೃತಿ ಮತ್ತು ಪುರುಷರು ಭಿನ್ನರೆಂಬ ಜ್ಞಾನದಿಂದ ಮಾತ್ರ ಸಾಧ್ಯ. ಸಾಂಖ್ಯವನ್ನು ಕುರಿತ ಗ್ರಂಥವು ಈಗ ಉಪಲಬ್ಧವಿಲ್ಲ. ಗೌಡಪಾದ ಋಷಿಗಳು ಮತ್ತು ವಾಚಸ್ಪತಿ ಮಿಶ್ರರು ಇದನ್ನು ಕುರಿತು ವ್ಯಾಖ್ಯಾನವನ್ನು ರಚಿಸಿದ್ದಾರೆ.* ಈ ದರ್ಶನವೂ ಕೂಡ ವೇದಪ್ರಾಮಾಣ್ಯವನ್ನು ಅಂಗೀಕರಿಸುತ್ತದೆ.

**ಯೋಗ**

ಯೋಗವು ಸಾಂಖ್ಯ ದರ್ಶನದ ಪ್ರಾಯೋಗಿಕ ಮುಖವನ್ನು ಪ್ರತಿನಿಧಿಸುತ್ತದೆ. ಪತಂಜಲಿ ಋಷಿಗಳು ಈ ಶಾಸ್ತ್ರದ ಗ್ರಂಥಕಾರರು. ಅವರ ಗ್ರಂಥಕ್ಕೆ ಯೋಗ ಸೂತ್ರ ಎಂದು ಹೆಸರು. ಇದು ೧೯೪ ಸೂತ್ರಗಳನ್ನು ೪ ಭಾಗಗಳಲ್ಲಿ ಹೊಂದಿದೆ. ಇದಕ್ಕೆ ವ್ಯಾಸ ಋಷಿಗಳ ವ್ಯಾಖ್ಯಾನವಿದೆ. ಮನಸ್ಸು, ಶರೀರ ಮತ್ತು ಭಾವನೆಗಳೇ

* ಸಾಂಖ್ಯದರ್ಶನವನ್ನು ಕುರಿತು ಉಪಲಬ್ಧವಿರುವ ಅತ್ಯಂತ ಪ್ರಾಚೀನ ಗ್ರಂಥವೆಂದರೆ ಈಶ್ವರ ಕೃಷ್ಣರ ಸಾಂಖ್ಯಕಾರಿಕಾ. ಗೌಡಪಾದ ಮತ್ತು ವಾಚಸ್ಪತಿ ಮಿಶ್ರರ ವ್ಯಾಖ್ಯಾನಗಳು ಈ ಶಾಸ್ತ್ರಕ್ಕೇ ಹೊರತು ಸಾಂಖ್ಯಸೂತ್ರದ ಮೇಲಲ್ಲ– ಅನುವಾದಕ

ಮುಂತಾದ ಅಂಶಗಳ ನಿಗ್ರಹದ ಮೂಲಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಅಷ್ಟಾಂಗಯೋಗದ ವಿಷಯ.

ಭೌತ ಜಗತ್ತನ್ನು ಕುರಿತ ಭಾರತೀಯ ತಾತ್ವಿಕ ನಿಲುವು ಸ್ಥೂಲವಾಗಿ ೩ ವಿಧ. ಇವು ಆರಂಭವಾದ, ಪರಿಣಾಮವಾದ ಮತ್ತು ವಿವರ್ತವಾದ ಎಂದು ಪ್ರಸಿದ್ಧವಾಗಿದೆ. ಇವುಗಳ ಪ್ರಕಾರ ಪರಮಾಣುಗಳು ಪೃಥ್ವಿ, ಅಪ್, ತೇಜ ಮತ್ತು ವಾಯು ಎಂಬ ನಾಲ್ಕು ವಿಧವಾದ ಪರಮಾಣುಗಳಿವೆ. ಇವು ಪರಸ್ಪರ ಸಂಯೋಜನೆಗೊಂಡು ಅಣುಗಳಾಗಿ (Molecules) ಕ್ರಮೇಣ ಇವು ವಿಶ್ವವಾಗಿ ಪರಿಣಮಿಸುತ್ತವೆ. ತಾರ್ಕಿಕರ ಪ್ರಕಾರ ಸೃಷ್ಟಿಗೆ ಮೊದಲು ವಿಶ್ವವು ಅಸ್ತಿತ್ವದಲ್ಲಿರಲಿಲ್ಲ. ಅಸತ್ ಆಗಿದ್ದ ವಿಶ್ವವು ಸತ್ ಆಗಿ ಪರಿಣಮಿಸುತ್ತದೆ. ಮೀಮಾಂಸಕರ ಪ್ರಕಾರ ಸತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳು ಮಹತ್ ಮತ್ತು ಅಹಂಕಾರವಾಗಿ ತನ್ಮೂಲಕ ಅವು ವಿಶ್ವವಾಗಿ ಪರಿಣಮಿಸುತ್ತವೆ. ಆದರೆ ಯೋಗ, ಪಾಶುಪತ ಮತ್ತು ಸಾಂಖ್ಯರ ಪ್ರಕಾರ ಸತ್ ಎಂಬುದೇ ವಿಶ್ವವನ್ನು ಅಸ್ತಿತ್ವಕ್ಕೆ ತರುವುದು. ವೈಷ್ಣವ ದರ್ಶನದ ಪ್ರಕಾರ ವಿಶ್ವವು ಬ್ರಹ್ಮದ ಒಂದು ಅಭಿವ್ಯಕ್ತಿ. ಬ್ರಹ್ಮವಾದಿಗಳಾದರೂ ಜಗತ್ತನ್ನು ಬ್ರಹ್ಮ ಮಾಯೆಯಿಂದ ಉಂಟಾದ ಭ್ರಾಂತಿ ಎಂದು ಬಗೆಯುತ್ತಾರೆ. ಈ ಎಲ್ಲಾ ದೃಷ್ಟಿಕೋನಗಳೂ ನಿಂತಿರುವುದು ದೇವರು ಒಬ್ಬನೇ ಎಂಬ ನಿಲುವಿನ ಮೇಲೆ.

**ಧರ್ಮಶಾಸ್ತ್ರಗಳು**

ನಂತರ ಧರ್ಮಶಾಸ್ತ್ರ ಮತ್ತು ಸ್ಮೃತಿಗಳು ಬರುತ್ತವೆ. ಇವು ವೇದಾಂಗದ ನಾಲ್ಕನೆಯ ಅನುಬಂಧಗಳಾಗಿವೆ. ಇವು ಸಂಖ್ಯೆಯಲ್ಲಿ ಅನೇಕ. ಮನುಸ್ಮೃತಿ, ವಿಷ್ಣು, ಆಂಗಿರಸ, ದಕ್ಷ, ಶತತಪ, ಗೌತಮ, ಯಾಜ್ಞವಲ್ಕ್ಯ, ಯಮ, ವಸಿಷ್ಠ, ಸಂವರ್ತ, ಪರಾಶರ, ಶಂಕ, ಹಾರೀತ, ಉಷಾನಸ, ಕಾತ್ಯಾಯನ, ದೇವಲ, ಆಪಸ್ತಂಬ, ವ್ಯಾಸ, ಬೃಹಸ್ಪತಿ, ನಾರದ ಮತ್ತು ಪೈಥೀನಸ ಸ್ಮೃತಿಗಳು ಕೆಲವು. ಈ ಸ್ಮೃತಿಗಳ ಹೆಸರಲ್ಲೇ ಸ್ಮೃತಿಕಾರರ ಹೆಸರೂ ಸೂಚಿತವಾಗಿದೆ.

ಮಹಾಕಾವ್ಯಗಳೆಂದು ಪ್ರಸಿದ್ಧವಾಗಿದ್ದರೂ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸಭಾರತಗಳನ್ನು ಸಮೀಕ್ಷೆಯ ಉದ್ದೇಶದಿಂದ ಧರ್ಮಶಾಸ್ತ್ರಗಳೆಂಬ ಶೀರ್ಷಿಕೆಯಡಿಯಲ್ಲಿ ನಾವು ಕಾಣಬಹುದು. ಜಗತ್ ಪ್ರಸಿದ್ಧವಾದ ಭಗವದ್ಗೀತೆಯು ಮಹಾಭಾರತದ ಭಾಗವಾಗಿದೆ. ಇದನ್ನು ಉಪನಿಷತ್ತೆಂದು ಪರಿಗಣಿಸಲಾಗಿದ್ದು ಆಚಾರ್ಯತ್ರಯರಲ್ಲದೆ ಇತರ ಮಹಾ ವಿದ್ವಾಂಸರು ಇದಕ್ಕೆ ಭಾಷ್ಯವನ್ನು ಬರೆದಿದ್ದಾರೆ. ಉಪನಿಷತ್ತುಗಳ ಉನ್ನತ ಆದರ್ಶದ ಸಾಕ್ಷಾತ್ಕಾರಕ್ಕೆಂದೇ ಗೀತೆಯು ಕೆಲವು ಅನುಷ್ಠೇಯ ಸಾಧನಗಳನ್ನು ಮುಂದಿಡುತ್ತದೆ.

* * * *



## ೩. ಉಪವೇದಗಳು

ಅನಂತರ ಉಪವೇದಗಳು ಬರುತ್ತವೆ. ಇವು ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರಗಳೆಂದು ನಾಲ್ಕು. ಇವುಗಳಲ್ಲಿ ಪ್ರತಿಯೊಂದೂ ಕ್ರಮವಾಗಿ ಒಂದೊಂದು ವೇದಕ್ಕೆ ಅನುಬಂಧವಾಗಿದೆ.

ಹೆಸರೇ ಸೂಚಿಸುವಂತೆ ಆಯುರ್ವೇದವು ಆಯಸ್ಸನ್ನು ವೃದ್ಧಿಗೊಳಿಸಿಕೊಳ್ಳುವ ವಿಧಾನವನ್ನು ಬೋಧಿಸುತ್ತದೆ. ಬೇರೆ ರೀತಿ ಹೇಳಬೇಕೆಂದರೆ ಅದು (ಭಾರತದ) ವೈದ್ಯಕೀಯ ಶಾಸ್ತ್ರ. ವೇದಕ್ಕೂ ವೈದ್ಯಕ್ಕೂ ಯಾವುದೇ ನೇರ ಸಂಬಂಧವಿಲ್ಲದಿದ್ದರೂ, ಇದಕ್ಕೆ ವೇದವಾಙ್ಮಯದಲ್ಲಿ ತನ್ನದೇ ಆದ ಸ್ಥಾನವಿದೆ. ಏಕೆಂದರೆ ಆರೋಗ್ಯಕರ ಸಮಾಜದಲ್ಲಿ ಕಾರ್ಯ ನಿರ್ವಹಿಸಲು ಆರೋಗ್ಯಕರ ಶರೀರವೂ ಅಗತ್ಯ. ಆಯುರ್ವೇದವನ್ನು ಕುರಿತು ಬ್ರಹ್ಮ, ಅಶ್ವಿನಿ ದೇವತೆಗಳು, ಧನ್ವಂತರೀ, ಇಂದ್ರ, ಭಾರದ್ವಾಜ ಋಷಿ, ಅತ್ರಿ, ಅಗ್ನಿವೇಷ ಮತ್ತು ಇತರರು ಗ್ರಂಥಗಳನ್ನು ಬರೆದಿದ್ದಾರೆ.

ತರುವಾಯ ಚರಕರು ಮೇಲಿನ ಗ್ರಂಥಗಳಲ್ಲಿ ಎಲ್ಲ ಸಂಗತಿಗಳನ್ನು ಸಂಹಿತೆ ಎಂಬ ತಮ್ಮ ಗ್ರಂಥದಲ್ಲಿ ಸಂಗ್ರಹಿಸಿದರು. ಅನಂತರ ಸುಶ್ರುತರು ಚರಕರನ್ನು ಅನುಸರಿಸಿದರು. ತರುವಾಯ ವಾಗ್ಭಟ ಈ ವಿಷಯದ ಬಗ್ಗೆ ಒಂದು ಗ್ರಂಥವನ್ನು ಬರೆದರು. ವೈದ್ಯದ ಜೊತೆಗೆ ಇವರೆಲ್ಲರಿಗೂ ಶಸ್ತ್ರಚಿಕಿತ್ಸೆ ಮತ್ತು ಚುಚ್ಚುಮದ್ದುಗಳು ತಿಳಿದಿತ್ತೆಂದು ತೋರುತ್ತದೆ.

ಆಯುರ್ವೇದವು ಮನುಷ್ಯನನ್ನು ೮ ಮುಖ್ಯ ಶೀರ್ಷಿಕೆಯಡಿಯಲ್ಲಿ ಚರ್ಚಿಸುತ್ತದೆ. ಇದರಲ್ಲಿ ಔಷಧ ಶಾಸ್ತ್ರವೂ (pharmacology) ಬರುತ್ತದೆ. ಕಾಮಶಾಸ್ತ್ರವೂ ಆಯುರ್ವೇದದೊಳಗೆ ಬರುತ್ತದೆ, ಸುಶ್ರುತರು ಕಾಯಕಲ್ಪ ಚಿಕಿತ್ಸೆಯ ಬಗ್ಗೆ (ಪುನಃ ಯೌವನವನ್ನು ಪಡೆಯುವ ಚಿಕಿತ್ಸಾ ಕ್ರಮ.) ಗ್ರಂಥವನ್ನು ಬರೆದಿದ್ದಾರೆ. ವಾತ್ಸ್ಯಾಯನರು ಕಾಮಶಾಸ್ತ್ರವನ್ನು ಬರೆದಿದ್ದಾರೆ. ಕಾಮಶಾಸ್ತ್ರದ ಉದ್ದೇಶ ಕಾಮೋದ್ದೀಪನವಾಗಿರದೆ ಮನುಷ್ಯನ ಲೈಂಗಿಕ ಬದುಕನ್ನು ನಿಯಂತ್ರಿಸುವುದಾಗಿದೆ.

ವಿಶ್ವಾಮಿತ್ರರು ಧನುರ್ವಿದ್ಯೆಯ ಕರ್ತೃಗಳೆಂದು ಪ್ರತೀತಿ. ಈ ಗ್ರಂಥವು ಬ್ರಹ್ಮವೇ ಮುಂತಾದ ಇತರರ ಪ್ರಾಚೀನ ಗ್ರಂಥವಿಷಯಗಳನ್ನು ಒಳಗೊಂಡಿದೆ. ನಾಲ್ಕು ಅಧ್ಯಾಯಗಳಿರುವ ಈ ಗ್ರಂಥವು ದೀಕ್ಷಾ, ಸಂಗ್ರಹ, ಸಿದ್ಧಾಂತ ಮತ್ತು ಪ್ರಯೋಗಗಳ ಬಗ್ಗೆ ಚರ್ಚಿಸುತ್ತದೆ. ಇಲ್ಲಿ ರಕ್ಷಣಾತ್ಮಕ ಮತ್ತು ಆಕ್ರಮಣಕಾರಿ ಈ ಎರಡೂ ಪ್ರಕಾರಗಳ

ಯುದ್ಧಗಳನ್ನು ಕುರಿತು ಚರ್ಚಿಸಲಾಗಿದೆ. ಚಕ್ರ, ಖಡ್ಗ ಮತ್ತು ತಿರುಗು ಆಯುಧವೇ ಮುಂತಾದ ಶಾಸ್ತ್ರಗಳ ವಿವರಣೆಯು ಇಲ್ಲಿ ಕಂಡುಬರುತ್ತದೆ. ಬ್ರಹ್ಮಾಸ್ತ್ರ, ವೈಷ್ಣವಾಸ್ತ್ರ, ಪಾಶುಪತಾಸ್ತ್ರ, ಆಗ್ನೇಯಾಸ್ತ್ರಗಳು ಇಲ್ಲಿ ಚರ್ಚಿಸಲಾಗಿರುವ ಕೆಲವು ಅಸ್ತ್ರಗಳು. ಅಲ್ಲದೆ ಉಚ್ಚರಿಸಬೇಕಾದ ಮಂತ್ರಗಳು, ಆವಾಹಿಸಬೇಕಾದ ದೇವತೆಗಳು, ಬಳಸಬೇಕಾದ ಅಸ್ತ್ರಗಳು ಅಣುಕು ಯುದ್ಧ ಇವೆಲ್ಲವೂ ಇಲ್ಲಿ ಚರ್ಚಿಸಲ್ಪಟ್ಟಿವೆ.

ಗಾಂಧರ್ವ ವೇದವು ಸಂಗೀತ ಮತ್ತು ನೃತ್ಯಗಳನ್ನು ಕುರಿತ ಶಾಸ್ತ್ರ. ಇದನ್ನು ಭರತಮುನಿಯು ಬರೆದನೆಂದು ಪ್ರತೀತಿ. ಇದು ನಂದಿಕೇಶ್ವರ, ನಾರದ, ಹನುಮಂತ ಮುಂತಾದವರು ಬರೆದ ಪ್ರಾಚೀನ ಗ್ರಂಥಗಳನ್ನು ಬಳಸಿಕೊಂಡಿದೆ. ಗಾಯನ, ನರ್ತನ, ಮತ್ತು ವಾದ್ಯಸಂಗೀತಗಳನ್ನು ಕುರಿತೂ ಅದು ಪ್ರಸ್ತಾಪಿಸುತ್ತದೆ. ಆಧ್ಯಾತ್ಮಿಕ ವಸ್ತುವನ್ನು ಒಳಗೊಂಡ ಈ ಶಾಸ್ತ್ರದ ಉದ್ದೇಶ ದೈವಾರಾಧನೆಯ ಮೂಲಕ ಚಿತ್ತೈಕಾಗ್ರತೆಯನ್ನು ಸಾಧಿಸುವುದು.

ಉಪವೇದಗಳಲ್ಲಿ ಕೊನೆಯದು ಅರ್ಥಶಾಸ್ತ್ರ. ಇದು ಹಣವೇ ಮುಂತಾದ ಲೌಕಿಕ ವಸ್ತುಗಳನ್ನು ಹೇಗೆ ಧರ್ಮಮಾರ್ಗದ ಮೂಲಕ ಸಂಪಾದಿಸಬೇಕೆಂಬುದನ್ನು ವಿವರಿಸುತ್ತದೆ. ಈ ಶೀರ್ಷಿಕೆಯಡಿಯಲ್ಲಿ ನೀತಿಶಾಸ್ತ್ರ, ಶಿಲ್ಪಶಾಸ್ತ್ರ, ೬೪ ಕಲೆಗಳು ಇವೇ ಮುಂತಾದ ಭೌತ ಹಾಗೂ ಭೌತಾತೀತ ವಿಷಯಗಳ ಪ್ರಸ್ತಾಪವು ಬರುತ್ತದೆ.

ಭೌತ ಸಂಗತಿಗಳ ಚರ್ಚೆಗೆ ಬರುವ ಮುನ್ನ ನಾವು ಪಾಶುಪತ ಮತ್ತು ಪಾಂಚರಾತ್ರ ತಂತ್ರಗಳ ಬಗ್ಗೆ ಸ್ವಲ್ಪ ವಿವರಿಸುವುದು ಅಗತ್ಯ.

ಪಾಶುಪತ ಪಂಥದ ಮೂಲ ಪುರುಷ ಪಶುಪಾಶವಿಮೋಕ್ಷಣ. ಪಾಶುಂಪತ ಗ್ರಂಥದಲ್ಲಿ ಐದು ಅಧ್ಯಾಯಗಳಿವೆ. ಅದು ಪಾಶುಪತಯೋಗವನ್ನು ಕುರಿತು ಚರ್ಚಿಸುತ್ತದೆ. ಇಲ್ಲಿ ಜೀವವನ್ನು ಪಶುವೆಂದೂ, ಅದಕ್ಕೆ ಕಾರಣವಾದ ದೇವರನ್ನು ಪಶುಪತಿಯೆಂದೂ ಕರೆಯಲಾಗಿದೆ. ಈ ಪಶುಪತಿಯ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದೇ ಯೋಗ. ಇದನ್ನು ಪ್ರತಿದಿನವೂ ಪವಿತ್ರ ಭಸ್ಮದಲ್ಲಿ ೬ ಸಲ ನಿರ್ದಿಷ್ಟ ವಿಧಿವಿಧಾನದಲ್ಲಿ ಸ್ನಾನ ಮಾಡುವ ಮೂಲಕ ಸಾಧಿಸಬಹುದು. ಈ ಶಾಸ್ತ್ರವು ಶೈವದರ್ಶನಾಧಾರಿತ. ಆದ್ದರಿಂದ ಶೈವಸಿದ್ಧಾಂತಕ್ಕೆ ಮುನ್ಸೂಚಕವಾಗಿದೆ. ಶೈವ ಮಂತ್ರಗಳು ಈ ವರ್ಗದಲ್ಲಿ ಬರುತ್ತವೆ.

ನಾರದರು ಪಾಂಚರಾತ್ರ ತಂತ್ರದ ಕರ್ತೃಗಳು. ಇದು ವಿಷ್ಣುಪೂಜಾವಿಧಾನವನ್ನು ವಿವರಿಸುತ್ತದೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ತತ್ವಗಳನ್ನು ಈ ದರ್ಶನದಲ್ಲಿ ಅಂಗೀಕರಿಸಲಾಗಿದೆ. ವಾಸುದೇವನೇ ಪರಮಾತ್ಮ. ಜೀವಾತ್ಮನು ಆತನಿಂದ ಹೊರಹೊಮ್ಮುವನು. ಜೀವನನ್ನು ಸಂಕರ್ಷಣನೆನ್ನುತ್ತಾರೆ. ಸಂಕರ್ಷಣನಿಂದ ಪ್ರದ್ಯುಮ್ನನೇ ಮುಂತಾದವರು ಬರುತ್ತಾರೆ. ತ್ರಿಕರಣಪೂರ್ವಕವಾಗಿ ವಾಸುದೇವನನ್ನು ಪೂಜಿಸುವುದು ಈ ಶಾಸ್ತ್ರದ ಪ್ರಕಾರ ಮನುಷ್ಯನ ಗುರಿ . ಈ ಶಾಸ್ತ್ರವು ವಿಷ್ಣುಮಂತ್ರಾನುಸಂಧಾನಕ್ಕೆ ಆದ್ಯತೆ ನೀಡುತ್ತದೆ.



ಶೈವ, ವೈಷ್ಣವ ಮತ್ತು ಶಾಕ್ತ ದರ್ಶನಗಳು ತಮ್ಮವೇ ಆದ ಪೂಜಾವಿಧಾನ ಗ್ರಂಥಗಳನ್ನು ರೂಪಿಸಿಕೊಂಡಿವೆ. ಈ ಗ್ರಂಥಗಳಿಗೆ ಅನುಸಾರವಾಗಿ ವೇದಗಳ ಹೆಸರಿನಲ್ಲಿ ದೇವಾಲಯಗಳಲ್ಲಿ ಪೂಜೆಗಳನ್ನು ಸಲ್ಲಿಸಲಾಗುವುದು. ಇಂತಹ ಗ್ರಂಥಗಳನ್ನು ಆಗಮಗಳೆಂದು ಕರೆಯುತ್ತಾರೆ. ಕಲೆ, ಸಂಗೀತ, ಶಿಲ್ಪಶಾಸ್ತ್ರ, ನೃತ್ಯ ಮತ್ತು ನಾಟಕಗಳು ಆಗಮಗಳ ಅವಿಭಾಜ್ಯ ಅಂಗಗಳು.

* * * *

# ೪. ಕಲೆಗಳು

ಈಗ ನಾವು ಹಿಂದೆ ಪ್ರಚಲಿತವಿದ್ದ ವಿವಿಧ ಕಲೆಗಳತ್ತ ಗಮನಹರಿಸೋಣ. ಇವೆಲ್ಲವೂ ವೇದಗಳ ಶೀರ್ಷಿಕೆಯಡಿಯಲ್ಲೇ ಪ್ರಸ್ತಾಪಿಸಲ್ಪಡುವುದು.

ಮೊದಲು ಪ್ರಸ್ತಾಪಿಸಬೇಕಿರುವುದು ವಿಶ್ವಕೋಶಶಾಸ್ತ್ರ. ಇದನ್ನು **ಅಕ್ಷರಲಕ್ಷ**ವೆನ್ನುತ್ತಾರೆ. ವಾಲ್ಮೀಕಿ ಋಷಿಯು ಈ ಶಾಸ್ತ್ರವನ್ನು ಬರೆದನೆಂದು ಪ್ರತೀತಿ. (ಖಚಿತವಾಗಿ ಹೇಳಬೇಕೆಂದರೆ) ಇದರಲ್ಲಿ ಎಲ್ಲ (೩೨೫) ಗಣಿತ ವಿಧಾನಗಳ ಚರ್ಚೆಯಿದೆಯೆನ್ನಲಾಗಿದೆ. ಇಲ್ಲಿ ಆಧುನಿಕ ಜ್ಯಾಮಿತಿ, ಬೀಜಗಣಿತ, ತ್ರಿಕೋನಮಿತಿ, ಖನಿಜಶಾಸ್ತ್ರ, ಜಲವಿದ್ಯುಚ್ಛಕ್ತಿಶಾಸ್ತ್ರ, ಭೂಗೋಳಶಾಸ್ತ್ರಗಳಲ್ಲದೆ ವಾಯು, ಉಷ್ಣ ಮತ್ತು ವಿದ್ಯುಚ್ಛಕ್ತಿಯನ್ನು ಅಳೆಯುವ ವಿಧಾನಗಳ ಚರ್ಚೆಯಿದೆ. ಈ ಕೃತಿಯು ಹಿಂದೆ ಕಶ್ಯಪಋಷಿ, ಗಣಪತಿ, ಸೂರ್ಯ, ಬೃಹಸ್ಪತಿ, ಜೈಮಿನಿ, ಹನೂಮಾನರೇ ಮುಂತಾದವರು ನಡೆಸಿದ ಸಂಶೋಧನೆಗಳನ್ನು ಒಳಗೊಂಡಿದೆ. ಕೃತಿಯಲ್ಲಿ ೫೦ ಅಧ್ಯಾಯಗಳಿದ್ದು ಮೊದಲರ್ಧ ಗಣಿತಶಾಸ್ತ್ರದ ಬಗ್ಗೆ ಉಳಿದರ್ಧ ಜಗತ್ತು ರಚಿಸಲ್ಪಟ್ಟಿರುವ ಶಕ್ತಿಗಳ ಬಗ್ಗೆ ವಿವರಿಸುತ್ತದೆ.

ನಂತರ ಬರುವ ಮುಖ್ಯವಾದ ಶಾಸ್ತ್ರವೆಂದರೆ **ಶಬ್ದಶಾಸ್ತ್ರ**. ಇದನ್ನು ಕಂಡಿಕಾ ಎಂಬ ಋಷಿಯು ಬರೆದ. ಇದು ಸೃಷ್ಟಿಯ ಸಕಲ ಚರಾಚರ ಪರವಸ್ತುಗಳಲ್ಲಿ ಹೇಗೆ ಶಬ್ದ ಪ್ರತಿಧ್ವನಿಗಳು ಉಂಟಾಗುತ್ತವೆಂಬುದನ್ನು ವಿವರಿಸುತ್ತದೆ. ಇದು ಐದು ಅಧ್ಯಾಯಗಳಲ್ಲಿ ಶಬ್ದಗಳನ್ನು ಗ್ರಹಿಸುವ ಅಥವಾ ಅವುಗಳಿದ್ದಂತೆ ಯಾಂತ್ರಿಕವಾಗಿ ನಕಲುಮಾಡುವ ವಿಧಾನವನ್ನು ಈ ಶಬ್ದಗಳ ಶ್ರುತಿ, ಸ್ಥಿರವೇಗಗಳನ್ನು (velocity) ಅಳೆಯುವ ವಿಧಾನಗಳನ್ನು ವಿವರಿಸುತ್ತದೆ.

ಶಕಟಾಯನನು **ಲಕ್ಷಣಶಾಸ್ತ್ರ**ವನ್ನು ಬರೆದ. ಇದು ಚರ ಮತ್ತು ಅಚರ ಜೀವಿಗಳ ಲಿಂಗವನ್ನು ಹೇಗೆ ನಿರ್ಧರಿಸ ಬಹುದೆಂಬುದನ್ನು ವಿವರಿಸುತ್ತದೆ. ಬಭ್ರುಮುನಿಯು **ಕನ್ಯಾಲಕ್ಷಣ**ವೆಂಬ ಗ್ರಂಥವನ್ನು ಬರೆದ. ಇಲ್ಲಿ ಆತನು ಕನ್ಯೆಯ ಶೀಲವನ್ನು ನಿರ್ಧರಿಸಲು ೩೨ ಲಕ್ಷಣಗಳನ್ನು ಸೂಚಿಸುತ್ತಾನೆ. ಗರ್ಗಋಷಿಯು **ಶಕುನಶಾಸ್ತ್ರ**ವನ್ನು ಬರೆದ. ಇಲ್ಲಿ ಆತನು ಶಕುನಗಳ ಬಗ್ಗೆ ಬರೆಯುತ್ತಾನೆ. ಎಂದರೆ ಪಕ್ಷಿಗಳ ಶಬ್ದಗಳಿಂದ, ಮಾನವರೇ ಮುಂತಾದವರ ಶಬ್ದಗಳ ಮೂಲಕ ಹೇಗೆ ಒಳ್ಳೆಯ ಹಾಗೂ ಕೆಟ್ಟ ಪರಿಣಾಮಗಳನ್ನು ನಿರ್ಧರಿಸಬಹುದು ಎಂಬುದನ್ನು ವಿವರಿಸುತ್ತಾನೆ.



ಕಾಶ್ಯಪ ಋಷಿಯು ರಚಿಸಿದ **ಶಿಲ್ಪಶಾಸ್ತ್ರ**ದಲ್ಲಿ ೨೨ ಅಧ್ಯಾಯಗಳಿದ್ದು ಇಲ್ಲಿ ೧೦೧ ವಿಧದ ವಿಗ್ರಹಗಳ ಹಾಗೂ ೩೦೭ ಶಿಲ್ಪ ಪ್ರಭೇದಗಳ ಬಗ್ಗೆ ಪ್ರಸ್ತಾಪವಿದೆ. ದೇವಾಲಯ, ಅರಮನೆ, ಸಭಾಂಗಣ ಇವೇ ಮುಂತಾದ ಸುಮಾರು ಒಂದು ಸಾವಿರ ವಿಧದ ಕಟ್ಟಡಗಳ ಬಗ್ಗೆ ಅದು ವಿವರಿಸುತ್ತದೆ. ಈ ವಿಷಯವನ್ನು ಕುರಿತ ಪ್ರಾಚೀನ ಗ್ರಂಥಕರ್ತರೆಂದರೆ ವಿಶ್ವಕರ್ಮ, ಮಯ, ಮಾರುತಿ, ಛಾಯಾಪುರುಷ, ಮುಂತಾದವರು. ಇವರೆಲ್ಲರ ಅಭಿಪ್ರಾಯಗಳನ್ನು ಶಿಲ್ಪಶಾಸ್ತ್ರದಲ್ಲಿ ಕ್ರೋಢೀಕರಿಸಲಾಗಿದೆ.

**ಸೂಪಶಾಸ್ತ್ರ** ಪಾಕಶಾಸ್ತ್ರವನ್ನು ಕುರಿತ ಗ್ರಂಥ. ಇದನ್ನು ಸುಕೇಶನೆಂಬುವನು ರಚಿಸಿದ. ಇಲ್ಲಿ ೧೦೮ ವಿಧದ ಅಡುಗೆಗಳ ಪ್ರಸ್ತಾಪವಿದೆ. ಮಸಾಲೆ ಪದಾರ್ಥಗಳು ಹಾಗೂ ಉಪ್ಪಿನಕಾಯಿಗಳಿಂದ ಹಿಡಿದು ಮಿಠಾಯಿ, ಇಡ್ಲಿ ದೋಸೆ, ರೊಟ್ಟಿ, ಕಜ್ಜಾಯ, ಕಡುಬುಗಳವರೆಗೆ ಈ ಅಡುಗೆ ತಯಾರಿಗಳಲ್ಲಿ ಸೇರುತ್ತವೆ. ಅಲ್ಲದೆ ಜಗತ್ತಿನ ವಿವಿಧ ಭಾಗಗಳಲ್ಲಿ ವಾಸಿಸುವ ಜನರಿಗೆಂದು ಸುಮಾರು ೩,೦೩೨ ರೀತಿಯ ಭಕ್ಷ್ಯಗಳನ್ನು ವಿವರಿಸಲಾಗಿದೆ.

**ಮಾಲಿನೀಶಾಸ್ತ್ರ**ವೆಂಬ ವಿಸ್ತಾರವಾದ ಗ್ರಂಥವನ್ನು ಬರೆದ ಖ್ಯಾತಿ ಋಷ್ಯಶೃಂಗ ಋಷಿಗಳಿಗೆ ಸಲ್ಲುತ್ತದೆ. ೧೬ ಅಧ್ಯಾಯಗಳಿರುವ ಈ ಗ್ರಂಥವು ಸ್ತ್ರೀಯರಿಗೆಂದೇ ಬರೆಯಲ್ಪಟ್ಟದ್ದೆಂದೂ ತೋರುತ್ತದೆ. ಪುಷ್ಪವಿನ್ಯಾಸ, ವಿವಿಧ ಶೈಲಿಗಳ ಮಾಲೆಗಳು, ಹೂಗೊಂಚಲು, ತುರುಬುಗಳು ಇವುಗಳ ತಯಾರಿಕೆಯ ಬಗ್ಗೆ ಈ ಗ್ರಂಥದಲ್ಲಿ ಪ್ರಸ್ತಾಪವಿದೆ. ಅಲ್ಲದೆ ಪುಷ್ಪದಳಗಳ ಮೇಲೆ ಸಂಕೇತಗಳ ಮೂಲಕ ಹೇಗೆ ಪ್ರೇಮಿಗಳಿಗೆ ಪ್ರೇಮಸಂದೇಶವನ್ನು ಬರೆಯಬಹುದೆಂಬ ಬಗ್ಗೆ ವಿವರಣೆಯೂ ಇಲ್ಲಿದೆ.

**ಕಾಲಶಾಸ್ತ್ರ**ವನ್ನು ಕಾರ್ತಿಕೇಯ ಸ್ವಾಮಿಯು ರಚಿಸಿದ. ಕಾಲವನ್ನು ನಿರ್ದಿಷ್ಟ ಅವಧಿಗಳಾಗಿ ವಿಗಂಡನೆ, ಈ ಅವಧಿಗಳನ್ನು ಶುಭಾಶುಭ ಕ್ಷಣಗಳೆಂಬ ವಿಂಗಡನೆ, ಯಾವ ಅವಧಿಗೆ ಯಾರು ಅಭಿಮಾನಿ ದೇವತೆ ಈ ಎಲ್ಲ ವಿಷಯಗಳನ್ನು ಗ್ರಂಥವು ಚರ್ಚಿಸುತ್ತದೆ.

ಸಮುದ್ರದೇವತೆಯಾದ ಸಮುದ್ರರಾಜನು **ಸಾಮುದ್ರಿಕಶಾಸ್ತ್ರ**ವನ್ನು ಬರೆದನೆಂದು ಪ್ರತೀತಿ. ಮಹಾವಿಷ್ಣುವು ಕ್ಷೀರಸಾಗರದಲ್ಲಿ ಆದಿಶೇಷನ ಮೇಲೆ ಪವಡಿಸಿದ್ದಾಗ ಸಮುದ್ರರಾಜನು ಮಹಾವಿಷ್ಣುವಿನ ಶರೀರದ ಮೇಲಿದ್ದ ಶುಭ ಚಿಹ್ನೆಗಳನ್ನು ಗುರುತು ಹಾಕಿಕೊಂಡನಂತೆ. ಇದು ನಂತರ ಸಾಮುದ್ರಿಕ ಶಾಸ್ತ್ರಕ್ಕೆ ಎಡೆಮಾಡಿಕೊಟ್ಟಿತು. ತರುವಾಯ ಈ ಶಾಸ್ತ್ರವನ್ನು ನಾರದ, ವರಾಹ, ಮಾಂಡವ್ಯ ಮತ್ತು ಕಾರ್ತಿಕೇಯರು ವಿಸ್ತರಿಸಿದರು. ಹಸ್ತಸಾಮುದ್ರಿಕಶಾಸ್ತ್ರವು ಇದರ ವ್ಯಾಪ್ತಿಯಲ್ಲಿ ಬರುತ್ತದೆ.

**ಧಾತುವಾದ** ಎಂಬ ಶಾಸ್ತ್ರವನ್ನು ಬರೆದ ಖ್ಯಾತಿಯು ಅಶ್ವಿನಿ ಕುಮಾರರಿಗೆ ಸಲ್ಲುತ್ತದೆ. ೭ ಅಧ್ಯಾಯಗಳುಳ್ಳ ಈ ಗ್ರಂಥದಲ್ಲಿ ನೈಸರ್ಗಿಕ ಮತ್ತು ಕೃತಕ ಧಾತುಗಳ ಚರ್ಚೆಯಿದೆ. ಎಂದರೆ ಅದು ವಸ್ತುವಿನ ಪ್ರಾಥಮಿಕ ಅಥವಾ ಮೂಲಭೂತ ರೂಪ

ಮತ್ತು ಅವುಗಳ ಸಂಯೋಜಿತ ಹಾಗೂ ಪರಿವರ್ತನಾ ರೂಪಗಳನ್ನು ಕುರಿತು ವಿವರಿಸುತ್ತದೆ. ರಸತಂತ್ರವನ್ನು ಕುರಿತ ವಿವರಣೆಯು ಇಲ್ಲಿ ಇದೆ. ಎಂದರೆ ತಾಮ್ರವೇ ಮುಂತಾದ ಲೋಹಗಳನ್ನು ಚಿನ್ನವಾಗಿ ಪರಿವರ್ತಿಸುವ ತಂತ್ರವನ್ನು ಈ ಕೃತಿಯು ವಿವರಿಸುತ್ತದೆ.

ಅಶ್ವಿನಿ ಕುಮಾರರು ವಿಷಶಾಸ್ತ್ರವನ್ನು ಬರೆದರೆಂದು ಪ್ರತೀತಿ. ಇದು ೩೨ ರೀತಿಯ ವಿಷಗಳನ್ನು, ಅವುಗಳ ಗುಣಗಳನ್ನು, ಅವುಗಳಿಂದ ತಯಾರಿಸಬಹುದಾದ ವಸ್ತುಗಳನ್ನು, ಮನುಷ್ಯನ ಮೇಲೆ ಅವು ಬೀರುವ ಪರಿಣಾಮಗಳನ್ನು ಮತ್ತು ಅವುಗಳ ಪ್ರಭಾವವನ್ನು ಪ್ರತ್ಯೌಷಧಗಳಿಂದನ್ನು ತಡೆಯುವ ವಿಧಾನವನ್ನು ಕುರಿತು ವಿಸ್ತಾರವಾಗಿ ವಿವರಿಸುತ್ತದೆ.

ಭೀಮನು ಲಲಿತ ಕಲೆಗಳನ್ನು ಕುರಿತ **ಚಿತ್ರಕರ್ಮಶಾಸ್ತ್ರ**ವನ್ನು ಬರೆದನೆಂದು ಪ್ರತೀತಿ. ಇದರಲ್ಲಿ ೧೨ ಅಧ್ಯಾಯಗಳಿದ್ದು, ಅದು ಸುಮಾರು ಚಿತ್ರಕಲೆಗಳ ೨೦೦ ಪ್ರಭೇದಗಳನ್ನು ಕುರಿತು ಪ್ರಸ್ತಾಪಿಸುತ್ತದೆ. ಇದರಲ್ಲಿ ಒಂದು ಸ್ವಾರಸ್ಯಕರ ಭಾಗವಿದೆ. ಈ ಭಾಗದಲ್ಲಿ ಒಬ್ಬ ವ್ಯಕ್ತಿಯ ಒಂದು ಕೂದಲು ಅಥವಾ ಉಗುರು ಅಥವಾ ಮೂಳೆಯನ್ನು ನೋಡಿ ಆ ವ್ಯಕ್ತಿಯ ಆಕೃತಿಯನ್ನು ಹೇಗೆ ಬಿಡಿಸಬಹುದು ಎಂಬುದನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗಿದೆ.

ಮಲ್ಲನೆಂಬಾತನು **ಮಲ್ಲಶಾಸ್ತ್ರ**ವನ್ನು ವಿಸ್ತಾರವಾಗಿ ಬರೆದನೆಂದು ಪ್ರತೀತಿ. ಇದು ಆಟೋಟಗಳಿಗೆ  ಸಂಬಂಧಿಸಿದ ಗ್ರಂಥ. ಆರೋಗ್ಯರಕ್ಷಣೆಗೆ ಅಗತ್ಯವಾದ ೮೨ ವಿಧದ ಕಸರತ್ತುಗಳು ಹಾಗೂ ಕ್ರೀಡೆಗಳ ಬಗ್ಗೆ ಇದು ಚರ್ಚಿಸುತ್ತದೆ. ಪದಾತಿಯುದ್ಧಕ್ಕೆ ಸಂಬಂಧಿಸಿದ ೨೪ ರೀತಿಯ ಮುಷ್ಟಿಕಾಳಗದ ಬಗ್ಗೆಯೂ ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ಗ್ರಂಥದಲ್ಲಿ ಮೂರು ಭಾಗಗಳಿವೆ.

ವಾಲಖಿಲ್ಯರು **ಪರಕಾಯಪ್ರವೇಶ**ವನ್ನು ಕುರಿತು ಗ್ರಂಥವನ್ನು ಬರೆದರು. ಎಂದರೆ ಇದು ಒಂದು ಶರೀರದಿಂದ ಮನುಷ್ಯನು ಇನ್ನೊಂದು ಶರೀರವನ್ನು ಹೇಗೆ ಪ್ರವೇಶಿಸಬಹುದು ಎಂಬುದನ್ನು ವಿವರಿಸುತ್ತದೆ. ಇದು ೩೨ ವಿಧದ ಯೋಗಗಳು ಹಾಗೂ ಅಣಿಮಾದಿ ಅಷ್ಟಸಿದ್ಧಿಗಳ ಬಗ್ಗೆಯೂ ಪ್ರಸ್ತಾಪಿಸುತ್ತದೆ.

ಅಗ್ನಿವರ್ಮನೆಂಬಾತನು **ತುರಗಶಾಸ್ತ್ರ**ವನ್ನು ವಿಸ್ತಾರವಾಗಿ ಬರೆದನೆಂದು ಪ್ರತೀತಿ. ಇಲ್ಲಿ ಉತ್ತಮ ತಳಿಯ ಕುದುರೆಯ ಲಕ್ಷಣಗಳು, ಅವುಗಳ ಶರೀರದ ರಚನೆ, ಅವುಗಳ ತರಬೇತಿ ಇತ್ಯಾದಿ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದೇ ರೀತಿ ಕುಮಾರಸ್ವಾಮಿ ಎಂಬಾತನು **ಗಜಶಾಸ್ತ್ರ**ವನ್ನು ಬರೆದನೆಂದು ಹೇಳುತ್ತಾರೆ. ಆತನು ಆನೆಗಳ ಶರೀರಗಳ ಮೇಲೆ ಇರುವ ವಿವಿಧ ಚಿಹ್ನೆಗಳನ್ನು ಪರೀಕ್ಷಿಸಲು ೧೬ ವಿಧಾನಗಳನ್ನು ಮುಂದಿಡುತ್ತಾನೆ.

ವಾತ್ಸ್ಯಾಯನ ಋಷಿಯು **ರತ್ನಪರೀಕ್ಷೆ** ಎಂಬ ಗ್ರಂಥವನ್ನು ಬರೆದಿದ್ದಾನೆ. ಇಲ್ಲಿ ರತ್ನಗಳನ್ನು ಪರೀಕ್ಷಿಸುವ ವಿಧಾನ, ಅವುಗಳ ೨೪ ಲಕ್ಷಣಗಳು, ಅಪ್ಪಟ



ಮತ್ತು ಕೃತಕ ರತ್ನಗಳು, ಅವುಗಳ ಆಕಾರ ತೂಕವೇ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಅಲ್ಲದೇ ಇಲ್ಲಿ ರತ್ನಗಳನ್ನು ಹೇಗೆ ವರ್ಗೀಕರಿಸಬಹುದೆಂಬುದನ್ನೂ ಒಳ್ಳೆಯ ರತ್ನವನ್ನು ಪರೀಕ್ಷಿಸಲು ೩೨ ವಿಧಾನಗಳನ್ನು ವಿವರಿಸಲಾಗಿದೆ.

ಸುಬ್ರಹ್ಮಣ್ಯ ಸ್ವಾಮಿಯ ಸೇನಾಧಿಪತಿಯಾದ ವೀರಬಾಹುವು ಮಹೇಂದ್ರ ಜಾಲವನ್ನು ಕುರಿತು ಗ್ರಂಥವನ್ನು ಬರೆದ. ನೀರಿನ ಮೇಲಿನ ನಡಿಗೆ, ಗಾಳಿಯಲ್ಲಿನ ಸವಾರಿ ಇವೇ ಮುಂತಾದ ಭ್ರಮೆಗಳನ್ನು ಹೇಗೆ ಸೃಷ್ಟಿಸಬಹುದು ಎಂಬುದನ್ನು ಈ ಗ್ರಂಥವು ಬೋಧಿಸುತ್ತದೆ.

ವ್ಯಾಸ ಋಷಿಯಿಂದ ರಚಿಸಲ್ಪಟ್ಟ ಅರ್ಥಶಾಸ್ತ್ರದಲ್ಲಿ ೩ ಅಧ್ಯಾಯಗಳಿವೆ. ಇದರಲ್ಲಿ ವ್ಯಾಸರು ಧರ್ಮಜೀವನವನ್ನು ನಡೆಸಿಯೂ ಹೇಗೆ ಒಬ್ಬನು ೮೨ ವಿಧಾನಗಳಲ್ಲಿ ಹಣವನ್ನು ಸಂಪಾದಿಸಬಹುದೆಂಬುದನ್ನು ಬೋಧಿಸುತ್ತಾರೆ.

ಶಕ್ತಿತಂತ್ರವೆಂಬ ಗ್ರಂಥವನ್ನು ಬರೆದ ಖ್ಯಾತಿ ಅಗಸ್ತ್ಯರಿಗೆ ಸಲ್ಲುತ್ತದೆ. ೮ ಅಧ್ಯಾಯಗಳಿರುವ ಈ ಗ್ರಂಥದಲ್ಲಿ ಮೂಲ ಪ್ರಕೃತಿ, ಮಾಯೆ ಮುಂತಾದ ತತ್ವಗಳನ್ನು ಹಾಗೂ ಸೂರ್ಯ, ಚಂದ್ರ, ವಾಯು, ಅಗ್ನಿಯೇ ಮುಂತಾದ ದೇವತೆಗಳ ಶರೀರಗಳ ೬೪ ಬಾಹ್ಯ ಶಕ್ತಿಗಳನ್ನು ವಿವರಿಸಲಾಗಿದೆಯಲ್ಲದೇ ಅವುಗಳ ಆನ್ವಯಿಕ ವಿಧಾನಗಳನ್ನೂ ನೀಡಲಾಗಿದೆ. ಪರಮಾಣು ವಿಭಜನೆ ಈ ಶಾಸ್ತ್ರದ ಅಂಗವಿರಬಹುದೆಂದು  (Nuclear Science) ತೋರುತ್ತದೆ.

ಸೌದಾಮಿನೀ ಕಲಾ ಎಂಬ ಶಾಸ್ತ್ರವನ್ನು ಮತಂಗ ಋಷಿಯು ಬರೆದನು. ಈ ಕಲೆ ಅಥವಾ ತಂತ್ರದ ಮೂಲಕ ಎಲ್ಲಾ ಘಟನೆಗಳನ್ನು ಮತ್ತು ಆಲೋಚನೆಗಳನ್ನು ಆ ಘಟನೆಗಳ ನೆರಳುಗಳ ಮೂಲಕ ನಮ್ಮೆಡೆಗೆ ಸೆಳೆದುಕೊಳ್ಳಬಹುದು. ಅಲ್ಲದೆ ಈ ಶಾಸ್ತ್ರದಲ್ಲಿ ಪರ್ವತ, ಭೂಮಿಯೇ ಮುಂತಾದವುಗಳ ಒಳಭಾಗಗಳನ್ನು ಛಾಯಾಚಿತ್ರದ ಮೂಲಕ ಸೆರೆಹಿಡಿಯುವ ತಂತ್ರವನ್ನು ಬೋಧಿಸಲಾಗಿದೆ.

ಅತ್ರಿ ಋಷಿಯು ಒಂದು ಶಾಸ್ತ್ರವನ್ನು ಬರೆದಿದ್ದಾನೆ. ಈ ಶಾಸ್ತ್ರವು ಮೋಡಗಳು, ಅವುಗಳ ವಿವಿಧ ಲಕ್ಷಣಗಳು, ಅವುಗಳ ೧೨ ವಿಧಗಳು, ೧೨ ವಿಧದ ಮಳೆಗಳು, ೬೪ ವಿಧದ ಮಿಂಚುಗಳು, ೩೩ ವಿಧದ ಗುಡುಗುಗಳು ಇತ್ಯಾದಿಗಳ ಬಗ್ಗೆ ವಿವರಿಸುತ್ತದೆ.

ಭಾರದ್ವಾಜರು ಯಂತ್ರಗಳನ್ನು ಕುರಿತು ಒಂದು ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಅವರು ಭೂಮಿಯ ಮೇಲೆ ಪ್ರಯಾಣ ಮಾಡಲು ಉಪಯುಕ್ತವಾದ ೩೩೯ ವಾಹನಗಳನ್ನು ೭೮೩ ರೀತಿಯ ದೋಣಿ ಹಾಗೂ ಹಡಗುಗಳನ್ನು ೧೦೧ ರೀತಿಯ ವಿಮಾನಗಳನ್ನು ವಿವರಿಸುತ್ತಾರೆ. ಈ ಎಲ್ಲಾ ರೀತಿಯ ವಾಹನಗಳನ್ನು ಮಂತ್ರ, ತಂತ್ರ ಮತ್ತು ಕೃತಕ ವಿಧಾನಗಳ ಮೂಲಕ ಉಪಯೋಗಿಸುವ ಬಗ್ಗೆಯೂ ಅವರು ಪ್ರಸ್ತಾಪಿಸುತ್ತಾರೆ. ಅಲ್ಲದೆ ಗಂಧರ್ವರೇ ಮುಂತಾದ ಅರೆ ದೇವತೆಗಳು

ಬಳಸುವ ವಾಹನಗಳ ಬಗ್ಗೆಯೂ ಅವರು ಪ್ರಸ್ತಾಪಿಸುತ್ತಾರೆ.

ಇದುವರೆಗೆ ಪ್ರಸ್ತುತ ಉಪಲಬ್ಧವಿರುವ ಗ್ರಂಥಗಳಲ್ಲಿ ಅಲ್ಲಲ್ಲಿ ಹರಡಿಹೋಗಿರುವ ನಮ್ಮ ಪೂರ್ವಜರ ಸಾಧನೆಗಳನ್ನು ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಅನೇಕ ಮೂಲ ಗ್ರಂಥಗಳು ಇನ್ನೂ ಉಪಲಬ್ಧವಿಲ್ಲ. ಇವು ಗುಪ್ತವಾಗಿರಬಹುದು ಇಲ್ಲವೇ ಕಳೆದು ಹೋಗಿರಬಹುದು. ಈ ಗ್ರಂಥಗಳು ಮನುಕುಲದ ಹಿತಕ್ಕಾಗಿ ಎಷ್ಟರಮಟ್ಟಿಗೆ ಪುನಃ ಶೋಧನೆಯಿಂದ ಹೊರತರಬಹುದೆಂಬುದನ್ನು ಪರಿಶೀಲಿಸಲು ಆಧುನಿಕ ವಿದ್ವಾಂಸರಿಗೆ ಬಿಡಲಾಗಿದೆ. ಆಧುನಿಕ ವಿದ್ವಾಂಸರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಶೀಲಿಸಬೇಕು.

* * * *



# ಭಾಗ ೨
# ಹಿಂದೂ ಸಂಸ್ಕಾರಗಳು

**BLANK**



## ೫. ಸಂಸ್ಕಾರ ವಿಧಿಗಳು

ಸಂಸ್ಕಾರ ಎಂಬ ಶಬ್ದಕ್ಕೆ ಅತಿ ಹತ್ತಿರದ ಆಂಗ್ಲ ಶಬ್ದ sacrament ಎಂದು. ಸಂಸ್ಕಾರಗಳು ಯಜ್ಞಯಾಗಾದಿ ಆಚರಣೆಗಳನ್ನು ಒಳಗೊಂಡಿವೆ. ಇವುಗಳನ್ನು ಆಚರಿಸುವುದರಿಂದ ಒಬ್ಬನು ಪವಿತ್ರನಾಗುವನೆಂಬುದು ಹಿಂದೂ ನಂಬಿಕೆ. ಈ ಸಂಸ್ಕಾರವಿಧಿಗಳು ಮನುಷ್ಯನು ಮಾತೃಗರ್ಭವನ್ನು ಸೇರಿದ ಕ್ಷಣದಿಂದ ಹಿಡಿದು ಅವನು ಸಾಯುವವರೆಗೆ ಅವನ ಜೀವನದ ಎಲ್ಲ ಘಟ್ಟಗಳಿಗೂ ಸಂಬಂಧಿಸಿವೆ. ಅಲ್ಲದೆ ಅವನ ಮರಣಾನಂತರದ ಉತ್ತರಕ್ರಿಯೆಗಳಿಗೂ ಅವು ಸಂಬಂಧಿಸಿವೆ. ಪರಲೋಕಕ್ಕೆ ಅವನ ಪ್ರಯಾಣ ಸುಗಮವಾಗಿರಬೇಕೆಂಬುದು ಇಲ್ಲಿನ ಆಶಯ.

ಅದಿರಿನಿಂದ ಹೊರತೆಗೆದ ಚಿನ್ನ ಅಥವಾ ವಜ್ರವು ತನ್ನ ಸಹಜ ಹೊಳಪಿಗಾಗಿ ಹೇಗೆ ಶುದ್ಧೀಕರಣಕ್ಕೆ ಒಳಗಾಗಬೇಕಿರುವುದೋ, ಹಾಗೆಯೇ ಮನಷ್ಯನು ಭೌತಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅತ್ಯಂತ ಶ್ರೇಷ್ಠರೂಪದಲ್ಲಿ ಹೊಳೆಯಲು ಅವನಿಗೆ ಸಂಸ್ಕಾರಗಳು ಅಗತ್ಯ. ಸಂಸ್ಕಾರಗಳೆಂದರೆ ಶುದ್ಧೀಕರಣವೆಂದರ್ಥ.

ಮಂತ್ರಗಳಲ್ಲಿ ಮತ್ತು ಸಂಸ್ಕಾರವಿಧಿಗಳಲ್ಲಿ ಬಳಸುವ ಚಿಹ್ನೆಗಳಲ್ಲಿ ಕಾಣಬರುವಂತೆ ಸಂಸ್ಕಾರಗಳ ವಿಷಯಗಳು ಹಲವಾರು. ಮೊದಲನೆಯದು ಜನಪ್ರಿಯವಾದ ಅಂಧ ಶ್ರದ್ಧೆಯನ್ನು ಆಧರಿಸಿದ್ದು. ಇಲ್ಲಿ ಮಾನವಬದುಕಿನ ವಿವಿಧ ಹಂತಗಳಲ್ಲಿ ಅವನನ್ನು ಕಾಡಬಹುದಾದ ದುಷ್ಟಶಕ್ತಿಗಳನ್ನು ನಿವಾರಿಸುವ ಯತ್ನವಿದೆ. ಎರಡನೆಯದು ಮನುಷ್ಯನು ಇಷ್ಟಾರ್ಥಗಳನ್ನು ಪಡೆಯುವ ಮೂಲಕ ಲೌಕಿಕ ಏಳಿಗೆಯನ್ನು ಹೊಂದಲು ದಯಾಮಯ ದೇವತೆಗಳನ್ನು ಕುರಿತ ಪ್ರಾರ್ಥನೆಗಳನ್ನು ಒಳಗೊಂಡಿದೆ.

ಮೊದಲನೆಯದಾಗಿ ಸಂಸ್ಕಾರಗಳ ಗುರಿ ವ್ಯಕ್ತಿಯ ಲೌಕಿಕ ಗುರಿಸಾಧನೆ. ಉದಾಹರಣೆಗೆ ಕೆಲವು ವಿಧಿಗಳಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಹಿತಪ್ರಾಪ್ತಿಗೆ ಸಹಕಾರಿಯಾಗಿರುವ ಪಶು, ಸಂತತಿ, ಧನ, ಆರೋಗ್ಯ, ಬುದ್ಧಿಯೇ ಮೊದಲಾದ ಇಷ್ಟಾರ್ಥಗಳನ್ನು ಹೊಂದಲು ದೇವತೆಗಳಿಗೆ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ. ಸಂಸ್ಕಾರಗಳು ಮನುಷ್ಯನ ಸುಖದುಃಖ, ಆಸೆಆಕಾಂಕ್ಷೆಗಳ ಅಭಿವ್ಯಕ್ತಿಯನ್ನು ಪ್ರತಿ ಬಿಂಬಿಸುತ್ತವೆ. ಮನುಷ್ಯನು ತನ್ನ ಆಸೆಆಕಾಂಕ್ಷೆಗಳನ್ನು ವಿವಿಧ ಸಮಾರಂಭಗಳಲ್ಲಿ ವಿವಿಧ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ. ಕೆಲವು ಸಮಾರಂಭಗಳನ್ನು ಅವನು ಹಬ್ಬ,

ಕೊಡುಗೆ, ತಳಿರುತೋರಣ, ಸಂಗೀತವೇ ಮುಂತಾದವುಗಳ ಮೂಲಕ ಆಚರಿಸಿದರೆ, ಶವಸಂಸ್ಕಾರಗಳಂತಹ ಇನ್ನು ಕೆಲವನ್ನು ಬೇರೊಂದು ಭಾವದಲ್ಲಿ ವ್ಯಕ್ತಪಡಿಸುತ್ತಾನೆ.

ಸಂಸ್ಕಾರಗಳು ವ್ಯಕ್ತಿಯಲ್ಲಿ ಅವನ ಸಾಮಾಜಿಕ ಸ್ಥಾನಮಾನಗಳ ಮತ್ತು ವಿಶೇಷ ಹಕ್ಕುಗಳ ಅರಿವನ್ನು ಮೂಡಿಸುತ್ತವೆ. ಯಜ್ಞೋಪವೀತವನ್ನು ಧರಿಸಿದ ಬಾಲಕನು ವೇದಾಧ್ಯಯನದ ಅಧಿಕಾರವನ್ನು ಪಡೆಯುತ್ತಾನೆ. ಹಾಗೆಯೇ ಗೃಹಸ್ಥನು ವೇದಪ್ರಣೀತವಾದ ಧರ್ಮಗಳನ್ನು ಆಚರಿಸುವ ಅಧಿಕಾರವನ್ನು ಹೊಂದುತ್ತಾನೆ.

ಸಂಸ್ಕಾರಗಳು ಸಾಂಸ್ಕೃತಿಕ ಲಾಭಗಳಿಗೆ ಕಾರಣವಾಗಿವೆ. ಪ್ರಾಚೀನ ಕಾನೂನು ತಜ್ಞರು ಸಂಸ್ಕಾರಗಳನ್ನು ಪಡೆಯುವವರ ಜೀವನದಲ್ಲಿ ಧರ್ಮ ಹಾಗೂ ಪಾವಿತ್ರ್ಯಗಳನ್ನು ಅಳವಡಿಸಲು ಪ್ರಾಮುಖ್ಯವನ್ನು ನೀಡಿದರು. ಏಕೆಂದರೆ ಅವರ ಪ್ರಕಾರ ಮನುಷ್ಯನು ಮಾತೃಗರ್ಭದಿಂದ ಹೊರಬರುವ ಮುನ್ನ ಅಶುದ್ಧವಾಗಿರುತ್ತಾನೆ. ಮನು ಮತ್ತು ಯಾಜ್ಞವಲ್ಕ್ಯರು ಈ ಅಶುದ್ಧಿಯನ್ನು ಸಂಸ್ಕಾರ ವಿಧಿಗಳ ಮೂಲಕ ನಿವಾರಿಸಬಹುದೆಂದು ಹೇಳುತ್ತಾರೆ. ಇದರಿಂದ ಮನುಷ್ಯನ ಶರೀರವು ಪರಮಾತ್ಮನ ಆಲಯವಾಗಲು ಯೋಗ್ಯವಾಗುತ್ತದೆ.

ಈ ಸಂಸ್ಕಾರಗಳಿಗೆ ಒಂದು ನೈತಿಕ ಉದ್ದೇಶವೂ ಉಂಟು. ಇವು ಮತ್ತು ಎಂಟು ಆತ್ಮಗುಣಗಳು ಮನುಷ್ಯನನ್ನು ಬ್ರಾಹ್ಮೀ ಸ್ಥಿತಿ ಅಥವಾ ಮೋಕ್ಷಕ್ಕೆ ಒಯ್ಯುವುದೆಂದು ಗೌತಮರ ಅಭಿಪ್ರಾಯ. ವಾಸ್ತವವಾಗಿ ಸಂಸ್ಕಾರಗಳು ಮನುಷ್ಯನು ತಲುಪಬೇಕಾದ ಆತ್ಯಂತಿಕ ಗುರಿಯಲ್ಲ. ಅವು ವ್ಯಕ್ತಿಯು ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ನೆರವಾಗುವ ಪ್ರಾರಂಭದ ಸಾಧನಗಳಷ್ಟೆ. ಬೇರೆ ರೀತಿ ಹೇಳಬೇಕೆಂದರೆ ಅವು ಸ್ವಾರ್ಥ ಲೌಕಿಕವನ್ನು ಮೀರುವ ವ್ಯಕ್ತಿಯ ನೈತಿಕ ಪ್ರಯತ್ನವನ್ನು ಪ್ರತಿನಿಧಿಸುತ್ತವೆ. ಇದೇ ಸಂಸ್ಕಾರಗಳ ನಿಜವಾದ ಕಾರ್ಯ. ಮನುಷ್ಯನ ಶೀಲವನ್ನು ರೂಪಿಸುವುದು ಈ ಸಂಸ್ಕಾರಗಳೇ.

ಸಂಸ್ಕಾರಗಳು ಹೇಗೆ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗಿದೆಯೆಂಬುದನ್ನು ಆಂಗಿರಸ ಋಷಿಗಳು ಹೀಗೆ ಕಾವ್ಯಾತ್ಮಕವಾಗಿ ಬಣ್ಣಿಸುತ್ತಾರೆ: "ಹೇಗೆ ಒಂದು ಚಿತ್ರವು ವಿವಿಧ ವರ್ಣಗಳಿಂದ ಬರೆಯಲ್ಪಟ್ಟಿರುತ್ತದೋ ಹಾಗೆಯೇ ವ್ಯಕ್ತಿಯ ಶೀಲವು ವಿವಿಧ ಸಂಸ್ಕಾರಗಳ ಸರಿಯಾದ ಆಚರಣೆಯಿಂದ ರೂಪಿತವಾಗುತ್ತದೆ."

ಒಟ್ಟಿನಲ್ಲಿ ಸಂಸ್ಕಾರಗಳು ಮಾನವನ ಬದುಕಿಗೆ ಕಡ್ಡಾಯವಾಗಿವೆ. ಅವುಗಳ ಉದ್ದೇಶ ಮನುಷ್ಯನ ಸರ್ವತೋಮುಖ ಹಿತ. ಅವು ಮನುಷ್ಯನ ಆಂತರಿಕ ಶಕ್ತಿಗಳ ಹರಿವನ್ನು ನಿಯಂತ್ರಿಸುವುದಷ್ಟೇ ಅಲ್ಲ, ಅವನ ಲೌಕಿಕ ಹಾಗೂ ಆಧ್ಯಾತ್ಮಿಕ ಬದುಕಿಗೂ ಪರಿಪೂರ್ಣತೆಯನ್ನು ನೀಡುತ್ತವೆ. ಈ ಉದ್ದೇಶವನ್ನು ಅವು ಘನವಾದ ರೀತಿಯಲ್ಲಿ ಉಪಾಯವಾಗಿ ಮತ್ತು ಪ್ರಾಯೋಗಿಕವಾಗಿ ಸಾಧಿಸುತ್ತವೆ.

ಮ್ಯಾಕ್ಸ್‌ಮುಲ್ಲರನನ್ನು ಉಲ್ಲೇಖಿಸಬೇಕೆಂದರೆ ಪ್ರಾಚೀನರು ವಿಧಿಸಿದ



ಈ ಸಂಸ್ಕಾರಗಳು "ಮಾನವಬದುಕಿನ ಮುಖ್ಯ ಘಟನೆಗಳನ್ನು ಉನ್ನತ ಶಕ್ತಿಗಳ ಸಂಪರ್ಕಕ್ಕೆ ತರಲು ಮತ್ತು ಅವರ ಸುಖದುಃಖಗಳಿಗೆ ಆಳವಾದ ಅರ್ಥವನ್ನು ಹಾಗೂ ಧಾರ್ಮಿಕ ಪಾವಿತ್ರ್ಯವನ್ನು ನೀಡಲು, ಅವನ ಹೃದಯಾಂತರಾಳದಲ್ಲಿ ಹುದುಗಿರುವ ಧೋರಣೆಯನ್ನು ವ್ಯಕ್ತಿಪಡಿಸುತ್ತವೆ".

* * * *

# ೬. ಇತಿಹಾಸ ಮತ್ತು ಆಕರಗಳು

ವೇದಯುಗದಲ್ಲಿ ಸಂಸ್ಕಾರಗಳ ಕಟ್ಟುನಿಟ್ಟಾದ ನಿಯಮಗಳಿರಲಿಲ್ಲವೆಂದು ತೋರುತ್ತದೆ. ಆದರೂ ಸಂಸ್ಕಾರಗಳನ್ನು ಕುರಿತ ಅತ್ಯಂತ ಪ್ರಾಚೀನ ಸೂಚನೆಗಳು **ಋಗ್ವೇದ**ದಲ್ಲಿ ಕಾಣಬರುತ್ತವೆ. ವಿವಾಹ, ಗರ್ಭಧಾರಣೆ, ಅಂತ್ಯೇಷ್ಟಿ ಹಾಗೂ ಇತರ ವಿಧಿಗಳ ಸಂದರ್ಭಗಳಲ್ಲಿ ಪ್ರಸ್ತುತ ಬಳಸುವ ಮಂತ್ರಗಳು ಋಗ್ವೇದದಲ್ಲೇ ಇವೆ. ಈ ಹೊರತಾಗಿ ಋಗ್ವೇದದಲ್ಲಿ ಸಂಸ್ಕಾರ ನಿಯಮಗಳನ್ನು ಕುರಿತ ಯಾವುದೇ ವ್ಯವಸ್ಥಿತ ನಿರೂಪಣೆಯಿಲ್ಲ.

**ಸಾಮವೇದ**ದಲ್ಲೂ ಈ ವಿಷಯುವನ್ನು ಕುರಿತ ಯಾವುದೇ ಮಾಹಿತಿಯಿಲ್ಲವೆನ್ನಬಹುದು. **ಯಜುರ್ವೇದ**ದಲ್ಲಿ ಚೌಲಕರ್ಮದ ಉಲ್ಲೇಖವಿದೆಯಾದರೂ ಈ ಕರ್ಮವು ಶ್ರೌತ ಅಥವಾ ಯಾಗವಿಧಿಗಳಿಗೆ ಸಂಬಂಧಪಟ್ಟದ್ದು ಎಂಬುದನ್ನು ನಾವು ನೆನಪಿನಲ್ಲಿಡಬೇಕು. **ಅಥರ್ವವೇದ**ದಲ್ಲಿ ಈ ಬಗ್ಗೆ ಯಾವುದೇ ವ್ಯವಸ್ಥಿತ ನಿರೂಪಣೆಯಿಲ್ಲವಾದರೂ ಅದರಲ್ಲಿ ಉಪನಯನ, ವಿವಾಹ, ಅಂತ್ಯಕ್ರಿಯೆಯೇ ಮುಂತಾದ ಹಲವಾರು ಸಂಸ್ಕಾರಗಳಿಗೆ, ಸಂಬಂಧಿಸಿದ ಮಂತ್ರಗಳು ಸಮೃದ್ಧವಾಗಿವೆ.

ಇನ್ನು **ಬ್ರಾಹ್ಮಣ**ಗಳ ಕಾಲಕ್ಕೆ ಬಂದರೆ **ಗೋಪಥ ಬ್ರಾಹ್ಮಣ**ದಲ್ಲಿ ಉಪನಯನ ಸಂಸ್ಕಾರದ ಉಲ್ಲೇಖವಿದೆ. **ಶತಪಥಬ್ರಾಹ್ಮಣ**ದಲ್ಲಿ ಬ್ರಹ್ಮಚರ್ಯ ಶಬ್ದವು ಕಂಡುಬರುತ್ತದೆ. ತೈತ್ತೀರಿಯ ಆರಣ್ಯಕದಲ್ಲಿ ಅಂತ್ಯಕ್ರಿಯೆಯ ಮಂತ್ರಗಳಿವೆ. ಛಾಂದೋಗ್ಯ **ಉಪನಿಷತ್ತು** ಗುರುಕುಲಕ್ಕೆ ಬ್ರಹ್ಮಚಾರಿ ಪ್ರವೇಶದ ಬಗ್ಗೆ ವಿವರಿಸುತ್ತದೆ. ಬೃಹದಾರಣ್ಯಕ ಉಪನಿಷತ್ತು ಗಾಯತ್ರಿ ಮಂತ್ರದ ಬಗ್ಗೆ ಪ್ರಸ್ತಾಪಿಸುತ್ತದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಘಟಿಕೋತ್ಸವ ಸಂದೇಶವಿದೆ. ಇದೇ ಉಪನಿಷತ್ತಿನಲ್ಲಿ ವಿದ್ವಾಂಸನಾದ ಮಗನನ್ನು ಪಡೆಯಲು ಅಗತ್ಯವಾದ ಹಾಗೂ ಉತ್ತರಕ್ರಿಯೆಗಳಿಗೆ ಸಂಬಂಧಿಸಿದ ಮಂತ್ರಗಳಿವೆ.

ಇವು ಸಂಸ್ಕಾರವಿಧಿಗಳ ಪ್ರಾರಂಭದ ಸಂಗ್ರಹ ನಿರೂಪಣೆ. ಪ್ರಾರಂಭದಲ್ಲಿ ಇವು ನಾಮಮಾತ್ರಕ್ಕೆ ಸಾಂಪ್ರದಾಯಿಕ ರೂಢಿಯಂತೆ ಆಚರಿಸಲ್ಪಡುತ್ತಿದ್ದವೆಂದೇ ನಾವು ಊಹಿಸಬೇಕಾಗುತ್ತದೆ. ಕ್ರಮೇಣ ನಾಗರಿಕತೆಯು ವಿಕಾಸಗೊಳ್ಳುತ್ತಿದ್ದಂತೆ, ಕಾಲದ ಅಗತ್ಯಕ್ಕೆ ಅನುಸಾರವಾಗಿ ಸಮುದಾಯಕ್ಕೆ ಸ್ಥಿರತೆಯನ್ನು ನೀಡಲು ಅವು ವಿಶದೀಕರಣ ಹಾಗೂ ಕ್ರೋಡೀಕರಣಕ್ಕೆ ಒಳಗಾದವು.



## ಮೂಲ ಆಕರಗಳು

ಬ್ರಾಹ್ಮಣಗಳಲ್ಲಿರುವ ವಿಧಿ ಆಚರಣೆಗಳ ವ್ಯವಸ್ಥಿತ ನಿರೂಪಣೆ **ಕಲ್ಪಸೂತ್ರಗಳಲ್ಲಿ** ಮಾತ್ರ ಕಂಡುಬರುವುದು. ಈ ಕಲ್ಪಸೂತ್ರಗಳು ವೇದಗಳ ಭಾಷ್ಯವೆಂದರೆ ತಪ್ಪಾಗಲಾರದು. ಕಾರಣ, ದೈನಂದಿನ ವಿಧಿಗಳ ಆಚರಣೆಗಾಗಿ ಪುರೋಹಿತರಿಗೆ ಒಂದು ಸಂಕ್ಷಿಪ್ತ ಕೈಪಿಡಿಯ ಅಗತ್ಯವಿತ್ತು. ಇಂತಹ ಗ್ರಂಥಗಳ ಪೈಕಿ **ಶ್ರೌತಸೂತ್ರ**ಗಳೂ ಒಂದು. ಇವು ವೈದಿಕ ಯಜ್ಞಯಾಗಾದಿಗಳನ್ನು ಕುರಿತು ವಿವರಿಸುತ್ತವೆ. ಗೃಹ ವಿಧಿಗಳ ಬಗ್ಗೆ ನಿರೂಪಿಸುವ ಗ್ರಂಥಗಳನ್ನು ಗೃಹ್ಯಸೂತ್ರಗಳೆಂದು ಕರೆಯುತ್ತಾರೆ. ಮೂಲತಃ ಯಾವ ಸಾಹಿತ್ಯಕ ಮೌಲ್ಯವಿಲ್ಲದಿದ್ದರೂ ಪ್ರಾಚೀನ ಭಾರತದ 'ಜನಪದ' ನಿಯತಕಾಲಿಕೆಗಳಾಗಿ ಅವು ಮೌಲ್ಯವನ್ನು ಹೊಂದಿವೆ. ಅವು ಪ್ರಾಚೀನ ಭಾರತದ ಸಾಮಾಜಿಕ ಬದುಕು, ರೂಢಿ ಸಂಪ್ರದಾಯಗಳ ನಿಖರವಾದ ಚಿತ್ರಣವನ್ನು ನೀಡುತ್ತವೆ.

**ಕೆಲವು ಗೃಹ್ಯ ಸೂತ್ರಗಳು ಕೆಳಕಂಡಂತಿವೆ :**

(೧) ಆಪಸ್ತಂಬ (೨) ಆಶ್ವಲಾಯನ (೩) ಬೌಧಾಯನ (೪) ಭಾರದ್ವಾಜ (೫) ಗೋಭಿಲ (೬) ಹಿರಣ್ಯಕೇಶೀಯ (೭) ಜೈಮಿನೀಯ (೮) ಖಾದಿರ (೯) ಮಾನವ (೧೦) ಪರಾಸ್ಕರ (೧೧) ಸಾಂಖ್ಯಾಯನ (೧೨) ವರಾಹ.

ಇವು ಬೇರೆ ಬೇರೆ ವೇದಗಳು ಮತ್ತು ಶಾಖೆಗಳಿಗೆ ಸೇರಿದವಾದ್ದರಿಂದ ವಿಷಯಸಾಮಗ್ರಿಯಲ್ಲೂ ಇವು ಭಿನ್ನವಾಗಿವೆ.

**ಧರ್ಮಸೂತ್ರ**ಗಳೆಂಬ ಮತ್ತೊಂದು ವರ್ಗದ ಗ್ರಂಥಗಳಿವೆ. ಇವು ಗೃಹ್ಯ ಸೂತ್ರಗಳ ವಿಸ್ತೃತ ರೂಪ. ಇವು ಮುಖ್ಯವಾಗಿ ಆಶ್ರಮಗಳಿಗೆ ಸಂಬಂಧಿಸಿದ ಲೌಕಿಕ ಹಾಗೂ ಧಾರ್ಮಿಕ ನಿಯಮಗಳನ್ನು ವಿವರಿಸುತ್ತವೆ. ಪ್ರಾಚೀನ ಭಾರತದಲ್ಲಿ ಈ ಎರಡೂ ಕ್ಷೇತ್ರಗಳ ನಡುವೆ ನಿಖರವಾದ ಗೆರೆಯನ್ನು ಎಳೆದಿರಲಿಲ್ಲ. ಆದ್ದರಿಂದ ಸಂಸ್ಕಾರಗಳ ಚರ್ಚೆ ಎರಡನೇ ವಿಧದ ಗ್ರಂಥಗಳಲ್ಲೂ ಕಂಡುಬರುತ್ತದೆ. ಇವುಗಳೊಂದಿಗೆ ಪರಿಶಿಷ್ಟಗಳನ್ನು ಅನುಬಂಧಿಸಲಾಗಿದೆ. ಈ ಪರಿಶಿಷ್ಟಗಳಲ್ಲಿ ಪ್ರಸಿದ್ಧವಾದ ೨೫ ವ್ಯಾಖ್ಯಾನಗಳು, ೨೪ ಪ್ರಯೋಗಗಳು ಮತ್ತು ೧೨ ಕಾರಿಕೆಗಳು ಸೇರಿವೆ. ವ್ಯಕ್ತಿಯ ಸಂಸ್ಕಾರಗಳನ್ನು ಕುರಿತ ವಿಶಿಷ್ಟ ರೀತಿಯ ಪ್ರಬಂಧಗಳೇ ಕಾರಿಕೆಗಳು. ಇವುಗಳಿಗೂ ಮೇಲೆ ಆಪ್ತವಾಕ್ಯಗಳಿವೆ. ಆಪ್ತ ವಾಕ್ಯವೆಂದರೆ ಸನಾತನ ಧರ್ಮವನ್ನು ಪಾಲಿಸುವ ಸಂತರ ಮತ್ತು ಹಿರಿಯರ ಮಾತುಗಳೆಂದರ್ಥ. ಧರ್ಮವಿಚಾರದಲ್ಲಿ ಸಂದೇಹ ಬಂದಾಗ ಈ ಮಾತುಗಳಿಗೆ ಸ್ಮೃತಿಯ ಪಾವಿತ್ರ್ಯವಿರುತ್ತದೆ.

ಇವು ಸಂಸ್ಕಾರಗಳನ್ನು ಕುರಿತು ಅಧಿಕಾರಯುತ ಮಾಹಿತಿಯನ್ನು ನೀಡುವ ಮೂಲ ಆಕರಗಳು. ಪ್ರಾಚೀನರು ಈ ಸಂಸ್ಕಾರಗಳಿಗೆ ಎಷ್ಟು ಮಹತ್ವ ನೀಡಿದರೆಂದರೆ ವಿಷಯದ ಬಗ್ಗೆ ಇರುವ ಅಸಂಖ್ಯಾತ ಗ್ರಂಥಗಳಿಂದಲೇ ಸ್ಪಷ್ಟವಾಗುತ್ತದೆ.

## ೭. ಸಾಮಾನ್ಯ ಲಕ್ಷಣಗಳು

ಒಟ್ಟು ಸಂಸ್ಕಾರಗಳು ನಲವತ್ತು. ಅವು ಯಾವುವೆಂದರೆ :

(೧) ಗರ್ಭಾಧಾನ
(೨) ಪುಂಸವನ
(೩) ಸೀಮಂತ
(೪) ಜಾತಕರ್ಮ
(೫) ನಾಮಕರಣ
(೬) ಅನ್ನಪ್ರಾಶನ
(೭) ಚೌಲ
(೮) ಉಪನಯನ
(೯) ಪ್ರಾಜಾಪತ್ಯ
(೧೦) ಸಾಮ್ಯ
(೧೧) ಆಗ್ನೇಯ
(೧೨) ವೈಶ್ವದೇವ
(೧೩) ಸಮಾವರ್ತನ
(೧೪) ವಿವಾಹ
(೧೫) ದೇವಯಜ್ಞ
(೧೬) ಪಿತೃಯಜ್ಞ
(೧೭) ಮನುಷ್ಯ ಯಜ್ಞ
(೧೮) ಭೂತಯಜ್ಞ
(೧೯) ಬ್ರಹ್ಮಯಜ್ಞ
(೨೦) ಅನ್ವಷ್ಟಕ
(೨೧) ಪರ್ವಣ
(೨೨) ಸ್ಥಾಲಿಪಾಕ
(೨೩) ಅಗ್ರಹಾಯಣಿ
(೨೪) ಶ್ರಾವಣಿ



(೨೫) ಚೈತ್ರಿ
(೨೬) ಆಶ್ವಯುಜೀ
(೨೭) ಅಗ್ನಿಆಧಾನ
(೨೮) ಅಗ್ನಿಹೋತ್ರ
(೨೯) ದರ್ಶಪೂರ್ಣಮಾಸ
(೩೦) ಆಗ್ರಯಣ
(೩೧) ಚಾತುರ್ಮಾಸ್ಯ
(೩೨) ನಿರೂಢಪಶುಬಂಧ
(೩೩) ಶಾಂತರಮಣಿ
(೩೪) ಅಗ್ನಿಷ್ಟೋಮ
(೩೫) ಅತ್ಯಗ್ನಿಷ್ಟೋಮ
(೩೬) ಉಕ್ಥ್ಯ
(೩೭) ಷೋಡಶಿ
(೩೮) ವಾಜಪೇಯ
(೩೯) ಅತಿರಾತ್ರ
(೪೦) ಅಪ್ತೋರ್ಯಾಮ

ಕೆಲವು ಲೇಖಕರ ಪ್ರಕಾರ ಸಂಸ್ಕಾರಗಳ ಸಂಖ್ಯೆ ೪೮.

ಮೇಲಿನ ಸಂಸ್ಕಾರಗಳು ಗರ್ಭಧಾರಣೆ, ಜನ್ಮ, ನಾಮಕರಣ, ಹೊಸಿಲು ದಾಟುವಿಕೆ, ಅನ್ನಪ್ರಾಶನ, ಚೌಲ, ಉಪನಯನ (ವೇದಾಧ್ಯಯನ ಪ್ರಾರಂಭ), ವೇದಾಧ್ಯಯನ ಸಮಾಪ್ತಿ ಇತ್ಯಾದಿಗಳಿಗೆ ಸಂಬಂಧಿಸಿದ ಆಚರಣೆಗಳ ಬಗ್ಗೆ ವಿವರಿಸುತ್ತವೆ.

* * * *

## ಸಾಮಾನ್ಯ ಅಂಶಗಳು

ಸಂಸ್ಕಾರಗಳಿಗೆ ಸಂಬಂಧಿಸಿದ ವಿಧಿಗಳಲ್ಲಿ ಲೌಕಿಕ ಹಾಗೂ ಧಾರ್ಮಿಕ – ಇವೆರಡೂ ಆಚರಣೆಗಳು ಸೇರಿವೆ. ಎರಡರಲ್ಲೂ ಕೆಲವು ಸಾಮಾನ್ಯ ಅಂಶಗಳಿವೆ. ಉದಾಹರಣೆಗೆ ಎರಡು ರೀತಿಯ ವಿಧಿಗಳಲ್ಲೂ ಅಗ್ನಿಯು ಅವಿಭಾಜ್ಯ ಅಂಗವಾಗಿದ್ದಾನೆ. ಆತನು ದೇವರ ಸಾಕಾರರೂಪವೇ ಸರಿ. ಎಂದರೆ ಆತನು ಕಣ್ಣಿಗೆ ಕಾಣುವ ದೇವರು. ಗೃಹಸದಸ್ಯರನ್ನು ರಕ್ಷಿಸುವ ಗೃಹಪತಿ ಅಥವಾ ಗೃಹಪಾಲಕ. ಆತನು ಎಲ್ಲ ಆಗುಹೋಗುಗಳನ್ನು ನೋಡುತ್ತಿರುವ ಸಾಕ್ಷಿಯೂ ಹೌದು. ಯಜ್ಞ ವಿಧಿಗಳಲ್ಲಿ ಪೂಜೆ ಸ್ವೀಕರಿಸುವಾತನು ಅಗ್ನಿಯೇ. ಇಲ್ಲಿ ಆತನಿಗೆ ನಿರ್ದಿಷ್ಟ ಸಾಮಗ್ರಿಗಳನ್ನು ಆಹುತಿ ನೀಡಿ ವ್ಯಕ್ತಿಯು ವಿವಿಧ ಫಲಗಳನ್ನು ಪಡೆಯುತ್ತಾನೆ.

ಅಗ್ನಿಯಿರುವೆಡೆ ನೀರೂ ಎಂದರೆ ವರುಣದೇವನೂ– ಇರುತ್ತಾನೆ. ನೀರನ್ನು ಅಭಿಮಂತ್ರಿಸಿ ಎಂದರೆ ನೀರಿನಲ್ಲಿ ಮಂತ್ರಗಳ ಮೂಲಕ ದೇವತೆಗಳನ್ನು ಆವಾಹಿಸಿ, ಆ ನೀರನ್ನು ಪವಿತ್ರಗೊಳಿಸಲಾಗುತ್ತದೆ. ಕೊಳೆ ಇಲ್ಲವೇ ಪಾಪವನ್ನು ತೊಳೆಯಲು ಈ ಪವಿತ್ರಜಲವನ್ನು ಪ್ರೋಕ್ಷಿಸುತ್ತಾರೆ ಅಥವಾ ಕುಡಿಯುತ್ತಾರೆ.

ಯಜ್ಞವಿಧಿಗಳಿಗೆ ಪ್ರಾರ್ಥನೆಗಳು ಅನಿವಾರ್ಯವೆಂಬುದು ನಮಗೆಲ್ಲರಿಗೂ ತಿಳಿದ ವಿಷಯ. ಇಲ್ಲಿ ಕಷ್ಟ ನಿವಾರಣೆ, ರಕ್ಷಣೆ ಹಾಗೂ ಲೌಕಿಕ ಸಮೃದ್ಧಿಗಾಗಿ ನಿರ್ದಿಷ್ಟ ದೇವತೆಗಳಲ್ಲಿ ಮೊರೆಯಿಡಲಾಗುತ್ತದೆ. ನೈತಿಕ ಪರಿಶುದ್ಧಿಯು ಉದ್ದೇಶವಾದಾಗ ಇಂತಹ ಪ್ರಾರ್ಥನೆಗಳು ಸದ್ಗುಣ ಮತ್ತು ತೀಕ್ಷ್ಣಮತಿಯ ಉಪಕರಣಗಳಾಗಿ ಪರಿಣಮಿಸುತ್ತವೆ. ಉದಾಹರಣೆಗೆ ಗಾಯತ್ರೀ ಮಂತ್ರ. ಅದೇ ರೀತಿ ಕೆಲವು ಆಶೀರ್ವಾದ ಮಂತ್ರಗಳಿವೆ. ಇವುಗಳನ್ನು ಪುರೋಹಿತರು ಉಚ್ಚರಿಸುತ್ತಾರೆ. ಇವರಲ್ಲಿ ದೇವತೆಗಳನ್ನು ಆವಾಹಿಸಲಾಗಿರುತ್ತದೆ.

ಸಂಸ್ಕಾರಗಳ ಮತ್ತೊಂದು ಮುಖ್ಯ ಅಂಗ ಸಂಕೇತ ಅಥವಾ ಚಿಹ್ನೆಗಳು. ಉದಾಹರಣೆಗೆ ವಿವಾಹಸಂಸ್ಕಾರದಲ್ಲಿ ಬಳಸುವ ಕಲ್ಲು ಸ್ಥಿರತೆಯ ಸಂಕೇತ. ಹಾಗೆಯೇ ಧ್ರುವ ನಕ್ಷತ್ರವು ಶಾಶ್ವತತೆಯ ಸಂಕೇತ. ಎಳ್ಳು, ಅಕ್ಕಿ, ಬೇಳೆಯೇ ಮುಂತಾದ ಧಾನ್ಯಗಳು ಫಲವತ್ತತೆಯ (fertility) (ಗರ್ಭಧಾರಣೆಯ ಸಾಮರ್ಥ್ಯದ) ಸಂಕೇತ. **ಪಾಣಿಗ್ರಹಣ**ವು ಅಥವಾ ವಧೂವರರು ಪರಸ್ಪರ ಕೈಯನ್ನು ಹಿಡಿಯುವುದು ಸಂಸಾರದ ಜವಾಬ್ದಾರಿಯನ್ನು ಹೊರುವುದರ ಸಂಕೇತ. ಸೂರ್ಯದರ್ಶನವು



ಆತನ ತೇಜಸ್ಸನ್ನು ಸೆಳೆದುಕೊಳ್ಳುವುದರ ಸಂಕೇತ.

ಸಾಮಾನ್ಯವಾಗಿ ಸಂಸ್ಕಾರಗಳಲ್ಲಿ ಆರೋಗ್ಯ, ಆಹಾರಪಥ್ಯ, ಉತ್ತಮ ಸಂತಾನ ಪ್ರಾಪ್ತಿ (ಮತ್ತು ಔಷಧಿ Eugenics) ಈ ಬಗ್ಗೆ ಮೂಲಭೂತ ಮಾಹಿತಿಯನ್ನು ನೀಡುವ ಪ್ರಜ್ಞಾಪೂರ್ವಕ ಪ್ರಯತ್ನವನ್ನು ನಾವು ಸೂಚ್ಯವಾಗಿ ಕಾಣಬಹುದು.

ಒಟ್ಟಿನಲ್ಲಿ ಇಡೀ ಸಂಸ್ಕಾರಗಳ ಉದ್ದೇಶ ಮನುಷ್ಯಜೀವನದ ವಿವಿಧ ಸಂದರ್ಭಗಳಲ್ಲಿ ಆಧ್ಯಾತ್ಮಿಕ ಸುಗಂಧವೆಂಬ ವಾತಾವರಣವನ್ನು ಸೃಷ್ಟಿಸುವುದು.

* * * *

# ೮. ಜನ್ಮಪೂರ್ವ ಸಂಸ್ಕಾರಗಳು

ಈಗ ಕೆಲವು ಮುಖ್ಯ ಸಂಸ್ಕಾರಗಳ ಮಹತ್ವ ಮತ್ತು ಉದ್ದೇಶಗಳನ್ನು ವಿವರಿಸಲಾಗುವುದು.

**ಗರ್ಭಾಧಾನ**

ಇದು ಗರ್ಭಧಾರಣೆಯ ವಿಧಿ. ಋತುಕಾಲದಲ್ಲಿ ಸ್ತ್ರೀಯರು ಮಾಡಬೇಕಾದ ಮತ್ತು ಮಾಡಬಾರದ ಕೆಲವು ಕೆಲಸಗಳಿರುತ್ತವೆ ಇವುಗಳಿಗೆ ಆಳವಾದ ಮನೋವೈಜ್ಞಾನಿಕ ಅರ್ಥವಿದೆ. ಜ್ಯೋತಿಷಿಗಳು ಗರ್ಭಾಧಾನಕ್ಕೆ ಶುಭವಾದ ದಿನ ಮತ್ತು ಮುಹೂರ್ತಗಳನ್ನು ನಿಗದಿಪಡಿಸುತ್ತಾರೆ. ಇದರ ನಂತರ ನಿರ್ದಿಷ್ಟ ವಿಧಿಗಳು ಬರುತ್ತವೆ. ಒಳ್ಳೆಯ ವಧೂ–ವರರು ಒಳ್ಳೆಯ ಮಗನನ್ನು ಪಡೆಯುವುದು ಈ ಸಂಸ್ಕಾರದ ಉದ್ದೇಶ. ಈ ಉದ್ದೇಶಪೂರೈಕೆಗಾಗಿ ಇಲ್ಲಿ ಕೆಲವು ದೇವತೆಗಳನ್ನು ಮಂತ್ರಮುಖೇನ ಪ್ರಾರ್ಥಿಸಲಾಗುತ್ತದೆ. ಈ ಮಂತ್ರಗಳಲ್ಲಿ ಕೆಲವು ರೂಪಕಗಳನ್ನು ಬಳಸಲಾಗಿದೆ. ಇವುಗಳನ್ನು ಸ್ಥೂಲವಾಗಿ ಹೀಗೆ ಭಾಷಾಂತರಿಸಬಹುದು: "ಘರ್ಷಣೆಯಿಂದ ಅಗ್ನಿಯು ಹೇಗೋ ಹಾಗೆಯೇ ನಾವು ದೃಢಕಾಯರಾದವರೂ ದೀರ್ಘಾಯುಷಿಗಳೂ ಆದ ಮಕ್ಕಳನ್ನು ಸೃಷ್ಟಿಸೋಣ; ಅಂತಹ ಮಗನು ಸದಾಚಾರವುಳ್ಳವನಾಗಿರಲಿ. ನಾನು ದೇವರ ಅಂಶ. ನನ್ನ ಪೂರ್ವಜರನ್ನು ಮುಕ್ತಿಗೊಳಿಸಲು ನಾನು ಸತ್ಪುತ್ರರನ್ನು ಸೃಷ್ಟಿಸುತ್ತೇನೆ. ನಾವು ತೇಜೋವಂತರೂ ಸಿರಿವಂತರೂ ಆದ ಮಕ್ಕಳನ್ನು ಪಡೆಯೋಣ. ಆತನು ಬಡವರಿಗೆ ಉದಾರವಾಗಿ ದಾನಮಾಡುವಂತಾಗಿ ಮುಕ್ತಿಯನ್ನು ಹೊಂದುವಂತಾಗಲಿ. ಗರ್ಭಧಾರಣೆಗೆ ನಿನ್ನನ್ನು ದೇವರು ಸಮರ್ಥಳನ್ನಾಗಿ ಮಾಡಲಿ. ನಿನ್ನನ್ನು ದುಷ್ಟಶಕ್ತಿಗಳು ಬಿಟ್ಟು ದೂರ ಓಡಲಿ, ನಿನ್ನ ಮಗುವು ಕುಂಟು, ಕಿವುಡು ಇತ್ಯಾದಿ ದೋಷಗಳಿಂದ ಮುಕ್ತವಾಗಿರಲಿ. ನೀನು ದೇವಲೋಕದ ಕಾಮಧೇನುವಿನಂತಿರು".

ದಂಪತಿಗಳಲ್ಲಿ ಯಾರಾದರೂ ಒಬ್ಬರು ಅಥವಾ ಇಬ್ಬರೂ ಅಸಮರ್ಥರಾದ ಸಂದರ್ಭದ ಹೊರತಾಗಿ ಪಿತೃಋಣವನ್ನು ತೀರಿಸಲು ಸಂತಾನಪ್ರಾಪ್ತಿಯು ಪ್ರತಿಯೊಬ್ಬ ಹಿಂದುವಿಗೂ ಕಡ್ಡಾಯವಾಗಿ ವಿಧಿಸಲಾಗಿರುವ ಕರ್ತವ್ಯ.

ಗರ್ಭಾಧಾನ ಸಂಸ್ಕಾರವನ್ನು ಗರ್ಭಧಾರಣೆಯ ಎರಡನೆಯ, ಮೂರನೆಯ ಅಥವಾ ನಾಲ್ಕನೆಯ ತಿಂಗಳಲ್ಲಿ ಮಾಡುತ್ತಾರೆ.



ಸ್ತ್ರೀಗರ್ಭದಲ್ಲಿ "ಪುತ್ರನನ್ನು ಚೈತನ್ಯಸ್ಥಿತಿಗೆ" ತರುವುದು ಈ ಸಂಸ್ಕಾರದ ಉದ್ದೇಶ. ಪ್ರತಿ ಮಗುವಿನ ಜನ್ಮದ ಮೊದಲು ಈ ಸಂಸ್ಕಾರವನ್ನು ಮಾಡಬೇಕೇ ಎಂಬ ಬಗ್ಗೆ ಋಷಿಗಳಲ್ಲಿ ಭಿನ್ನಾಭಿಪ್ರಾಯವಿದೆ. ಮಿತಾಕ್ಷರನ ಪ್ರಕಾರ ಈ ಸಂಸ್ಕಾರವು ಮೊದಲ ಗರ್ಭಧಾರಣೆಗಷ್ಟೇ ಸಾಕು. ಬೇಕಿದ್ದರೆ ಈ ಸಂಸ್ಕಾರವನ್ನು ಸೀಮಂತೋನ್ನಯನ ಸಂಸ್ಕಾರದ ಜೊತೆಗೆ ಮಾಡಬಹುದು. ಪುರುಷ ನಕ್ಷತ್ರದಂದು **ಪುಂಸವನ**ವನ್ನು ಮಾಡುತ್ತಾರೆ. ಈ ವಿಧಿಯಲ್ಲಿ ಗಂಡುಮಗುವಿನ ಜನ್ಮಕ್ಕಾಗಿ ಇಲ್ಲವೇ ಯೋಗ್ಯ ಸಂತಾನಕ್ಕಾಗಿ ಪ್ರಾರ್ಥಿಸುತ್ತಾ ಗರ್ಭಿಣಿಯ ಮೂಗಿನ ಬಲಹೊಳ್ಳೆಯಲ್ಲಿ ಆಲದ ಮರದ ಕಾಂಡದ ರಸದ ಕೆಲವು ಹನಿಗಳನ್ನು ಹಾಕುತ್ತಾರೆ. ಆಯುರ್ವೇದದ ಕರ್ತೃವಾದ ಸುಶ್ರುತನ ಪ್ರಕಾರ ಗರ್ಭಕಾಲದಲ್ಲಿ ಬರಬಹುದಾದ ತೊಂದರೆಯನ್ನು ನಿವಾರಿಸುವ ಶಕ್ತಿಇದೆ. ರಕ್ಷಣೆಯ ದ್ಯೋತಕವಾಗಿ ಪವಿತ್ರ ಕಂಕಣವನ್ನು ಗರ್ಭಿಣಿಯ ಎಡಮಣಿಕಟ್ಟಿಗೆ ಕಟ್ಟುತ್ತಾರೆ. ಆಗ ಹೇಳುವ ಮಂತ್ರಗಳನ್ನು ಹೀಗೆ ಭಾಷಾಂತರಿಸಬಹುದು: "ಈಶಾನ ದೇವತೆಯು ನಮ್ಮ ಬಯಕೆಗಳನ್ನು ಈಡೇರಿಸಲಿ ; ಧಾತಾ ದೇವತೆಯು ಜಗತ್ತಿಗೆ ಸಿರಿಸಂತಾನಗಳನ್ನು ಅನುಗ್ರಹಿಸಲಿ. ಆತನು ಈ ಕುಟುಂಬಕ್ಕೂ ಇದೇ ರೀತಿಯ ಅನುಗ್ರಹವನ್ನು ಉಂಟುಮಾಡಲಿ. ಈ ಮನೆಯಲ್ಲಿ ದೇವತೆಗಳು ನೆಲೆಸಲಿ. ಅಗ್ನಿಯು ನನಗೆ ಪುತ್ರರನ್ನು ಅನುಗ್ರಹಿಸಲಿ. ಇಂದ್ರನು ನನಗೆ ಮಕ್ಕಳನ್ನು ನೀಡಲಿ. ನಾನು ಸುಂದರವಾದ ಮಕ್ಕಳನ್ನು ಹೊಂದುವಂತಾಗಲಿ."

**ಸೀಮಂತೋನ್ನಯನ**

ಇದು ಗರ್ಭಪೂರ್ವದ ಸಂಸ್ಕಾರಗಳಲ್ಲಿ ಮೂರನೆಯದು. ಸಾಮಾನ್ಯವಾಗಿ ಈ ಸಂಸ್ಕಾರವನ್ನು ಗರ್ಭಧಾರಣೆಯ ಐದು ಮತ್ತು ಎಂಟನೆಯ ತಿಂಗಳಲ್ಲಿ ಮಾಡುತ್ತಾರೆ. ಈ ಸಂಸ್ಕಾರದಲ್ಲಿ ಗರ್ಭಿಣಿಗೆ ಬೈತಲೆ ತೆಗೆಯುತ್ತಾರೆ. ಎಂದರೆ ತಲೆಯ ಕೂದಲುಗಳನ್ನು ಮಧ್ಯದಲ್ಲಿ ಪ್ರತ್ಯೇಕಿಸುತ್ತಾರೆ. ಬೈತಲೆ ಶಾಸ್ತ್ರ ಮುಂದೆ ತಾಯಿಗೆ ಉಂಟಾಗಬಹುದಾದ ಆಘಾತಗಳನ್ನು ಹೋಗಲಾಡಿಸುವುದರ ಸಂಕೇತ. ಇದು ಆಕೆಯನ್ನು ನಿಶ್ಚಿಂತವಾಗಿರಿಸಲು ಮತ್ತು ಮಾನಸಿಕವಾಗಿ ಆಕೆಯಲ್ಲಿ ಉತ್ಸಾಹ ತುಂಬಲು ನೆರವಾಗುತ್ತದೆ.

ಮುಳ್ಳು ಹಂದಿಯ ಗರಿ, ಬತ್ತದ ತೆನೆ ಮತ್ತು ಅತ್ತಿ ಎಲೆಯ ಗೊಂಚಲು – ಇವು ಮೇಲಿನ ವಿಧಿಗೆ ಬಳಸುವ ಸಾಮಗ್ರಿಗಳು. ಈ ಸಾಮಗ್ರಿಗಳು ಸ್ತ್ರೀಗೆ ಮಾತ್ರ ಸೀಮಿತ. ಇಲ್ಲಿ ರಾಕಾ ದೇವತೆಯನ್ನು ಆವಾಹಿಸುತ್ತಾರೆ. ಈಕೆ ಹುಣ್ಣಿಮೆಯ ಅಭಿಮಾನಿ ದೇವತೆ. ಮಗುವಿನ ಬುದ್ಧಿಯು ಗರಿಯ ಮೊನೆಯಂತೆ ಹರಿತವಾಗಿರಬೇಕು ಹಾಗೂ ತೀಕ್ಷ್ಣವಾಗಿರಬೇಕು. ಮತ್ತು ಮಗುವು ಹುಣ್ಣಿಮೆಯ ಚಂದ್ರನಂತೆ ಅಂದವಾಗಿರಬೇಕೆಂಬುದು ಇದರ ಆಶಯ. ಮಂತ್ರದ ತಿರುಳು ಹೀಗಿದೆ:

"ನಾನು ರಾಕಾ ದೇವತೆಯನ್ನು ಪ್ರಾರ್ಥಿಸುತ್ತೇನೆ. ಈ ಸಂಸ್ಕಾರವನ್ನು ಕಳಂಕರಹಿತವನ್ನಾಗಿಸಲಿ. ನನ್ನ ಮಗನು ತೀಕ್ಷ್ಣಮತಿಯಾಗಲಿ."

ಈ ಸಂಧರ್ಭದಲ್ಲಿ ಸಂಗೀತ 'ಅದರಲ್ಲೂ ವಿಶೇಷವಾಗಿ ವೀಣಾವಾದನ' ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ. ಇದು ತಾಯಿಗೆ ಮೊಲೆಯುಣಿಸುವ ಶಕ್ತಿಯನ್ನು ಹೆಚ್ಚಿಸುವುದಷ್ಟೇ ಅಲ್ಲದೇ, ಆಕೆಗೆ ಇದರಿಂದ ಇತರ ಮನೋವೈಜ್ಞಾನಿಕ ಪ್ರಯೋಜನಗಳೂ ಉಂಟಾಗುತ್ತವೆ. ಇಲ್ಲಿ ಸುಮಂಗಲಿಯರು ಹೀಗೆ ಹಾಡುತ್ತಾರೆ: "ವೀರ್ಯವಂತರ ತಾಯಿಯಾಗು." ಇದು ಭರವಸೆ, ಉತ್ಸಾಹ, ಆತ್ಮವಿಶ್ವಾಸಗಳ ವಾತಾವರಣವನ್ನು ಮೂಡಿಸುತ್ತದೆ. ಈ ಸಂಸ್ಕಾರದ ನಂತರ ತಾಯಿಯು ರಾತ್ರಿ ನಕ್ಷತ್ರಗಳು ಬರುವವರೆಗೆ ಉಪವಾಸವನ್ನು ಆಚರಿಸಬೇಕಾಗುತ್ತದೆ. ಈ ವಿಧಿಯ ಕೊನೆಯಲ್ಲಿ ಆಕೆಯ ಗಂಡು ಮಗುವಿನ ಸಂಕೇತವಾಗಿ ಗಂಡುಕರುವನ್ನು ಮುಟ್ಟುತ್ತಾಳೆ.

* * * *



# ೯. ಜನನಾನಂತರದ ಸಂಸ್ಕಾರಗಳು

**ಜಾತಕರ್ಮ**

ಮಗುವು ಹುಟ್ಟಿದ ತಕ್ಷಣವೇ ಈ ಸಂಸ್ಕಾರವನ್ನು ಮಾಡಬೇಕು. ಇದಕ್ಕೆ ಮೊದಲು ಜನ್ಮಪೂರ್ವ ವಿಷಯವನ್ನು ಕುರಿತು ಕೆಲವು ಸ್ವಾರಸ್ಯಕರ ಅಂಶಗಳತ್ತ ದೃಷ್ಟಿ ಹಾಯಿಸೋಣ.

ಪ್ರಸವಕ್ಕೆ ಒಂದು ತಿಂಗಳು ಮೊದಲು ಒಂದು ಶುಭದಿನದಂದು ಸೂತಿಕಾಗೃಹವೊಂದನ್ನು ಆಯ್ದುಕೊಳ್ಳುತ್ತಾರೆ. ಈ ಗೃಹವು ನೈಋತ್ಯ ದಿಕ್ಕಿನಲ್ಲಿರಬೇಕು. ನೆಲವು ಸಮತಟ್ಟಾಗಿರಬೇಕು. ತುಂಬುಗರ್ಭಿಣಿಯು ನಿರೀಕ್ಷಿತ ದಿನಕ್ಕೆ ಒಂದೆರಡು ದಿನ ಮೊದಲೇ ಮನೆದೇವರನ್ನು ಮತ್ತು ಗುರುಹಿರಿಯನ್ನು ವಂದಿಸಿ ಘಂಟೆ, ಸಂಗೀತವೇ, ಮುಂತಾದ ಮಂಗಳನಾದದೊಂದಿಗೆ ಹಾಗೂ ಅನುಭವಿ ತಾಯಿಯೊಂದಿಗೆ ಸೂತಿಕಾ ಗೃಹವನ್ನು ಪ್ರವೇಶಿಸುತ್ತಾಳೆ. ಈ ಅನುಭವಿಗಳು ಗರ್ಭಿಣಿಯ ಮನಸ್ಸನ್ನು ಸಂತೋಷಪಡಿಸುವರಷ್ಟೇ ಅಲ್ಲದೆ ನಿಗದಿತ ಆಹಾರಕ್ರಮ, ಅನುಲೇಪವೇ (ointment ) ಮುಂತಾದ ವಿಧಾನಗಳ ಮೂಲಕ ಆಕೆಯನ್ನು ಸುಖಪ್ರಸವಕ್ಕೆ ಸಿದ್ಧಗೊಳಿಸುತ್ತಾರೆ. ಹಸುಗೂಸನ್ನು ಸೂರ್ಯಕಿರಣಗಳ ಪ್ರಖರತೆಯಿಂದ ರಕ್ಷಿಸಲು ಕೊಠಡಿಯನ್ನು ಹೆಚ್ಚುಕಡಿಮೆ ಕತ್ತಲಾಗಿರಿಸಲಾಗುತ್ತದೆ. ಅಲ್ಲದೆ ಇದು ಕಂದನ ಅಕ್ಷಿಪಟವನ್ನು(retina) ಕಪ್ಪಗಿರಿಸಲು ಸಹಾಯಕ. ಪ್ರಸವಕಾಲ ಹತ್ತಿರವಾಗುತ್ತಿರಲು ಗರ್ಭಿಣಿಯನ್ನು ಬೆನ್ನಿಗೆ ಆನಿಸಿ ಮಲಗಿಸಲಾಗುತ್ತದೆ. ದುಷ್ಟ ಶಕ್ತಿ ನಿವಾರಣೆಗಾಗಿ ಕೊಠಡಿಯಾಚೆ ಮಂತ್ರೋಚ್ಚಾರಣೆ ನಡೆಯುತ್ತಿರುತ್ತದೆ. ಮನೆಯ ಹಿರಿಯನು ಹಗ್ಗವೊಂದಕ್ಕೆ ಹಾಕಿರುವ ಗಂಟುಗಳನ್ನು ಬಿಚ್ಚಲು ಪ್ರಾರಂಭಿಸುತ್ತಾನೆ. ಇದು ಬಿಗಿ ಸ್ನಾಯುಗಳ ಹಿಡಿತದಿಂದ ಮಗುವನ್ನು ಸಡಿಲಗೊಳಿಸುವುದರ ಸಂಕೇತ. ದುಷ್ಟಶಕ್ತಿ ನಿವಾರಣೆಗೆಂದು ಹಾಗೂ ಸುಲಭ ಪ್ರಸವಕ್ಕೆಂದು ಗರ್ಭಿಣಿಯ ಹತ್ತಿರ ತುರ್ಯಂತೀ ಎಲೆಗಳನ್ನು ಇರಿಸಲಾಗುತ್ತದೆ. ಪ್ರಸವವು ಕಷ್ಟವಾದಲ್ಲಿ ಅಥರ್ವವೇದದ ಮಂತ್ರವೊದನ್ನು ಉಚ್ಚರಿಸಲಾಗುತ್ತದೆ. ಸುಲಭ ಹೆರಿಗೆಯ ನಂತರ ಮಗು ಮತ್ತು ಅದರ ತಾಯಿಯನ್ನು ಶುದ್ಧಗೊಳಿಸಲು ಸೂತಿಕಾ ಗೃಹದಲ್ಲಿ ಸಣ್ಣ ಅಗ್ನಿಯನ್ನು ಹೊತ್ತಿಸಲಾಗುತ್ತದೆ. ಇದನ್ನು ಸೂತಿಕಾಗ್ನಿ ಎಂದು ಕರೆಯುತ್ತಾರೆ. ದುಷ್ಟಶಕ್ತಿ ಹಾಗೂ ಕೆಟ್ಟ ಶಕ್ತಿಗಳ ನಿವಾರಣೆಗಾಗಿ ಸಾಸಿವೆ ಕಾಳು ಮತ್ತು ಧಾನ್ಯಗಳನ್ನು ಅಗ್ನಿಗೆ ಅರ್ಪಿಸಲಾಗುತ್ತದೆ.

(ಹತ್ತಿರದ ನೆಂಟರಲ್ಲಿ ಸಂಭವಿಸುವ ಸಾವು ಮುಂತಾದ ಆಶೌಚಗಳ ಹೊರತಾಗಿ) ಈ ಸಂಸ್ಕಾರವನ್ನು ಮಗುವಿನ ಕರುಳುಬಳ್ಳಿಯನ್ನು ಕತ್ತರಿಸುವ ಮುನ್ನ ಮಾಡಬೇಕು. ನವಜಾತ ಶಿಶುವಿನ ಮುಖವನ್ನು ನೋಡಿ ತಂದೆಯು ತನ್ನ ಪಿತೃಗಳ ಋಣವನ್ನು ತೀರಿಸುತ್ತಾನೆ ! ತಕ್ಷಣವೇ ತಣ್ಣೀರಿನಲ್ಲಿ ಸಚೇಲನಾಗಿ ಸ್ನಾನ ಮಾಡುತ್ತಾನೆ. ವಾಸ್ತವವಾಗಿ ಅವನು ನದಿ ಅಥವಾ ಕೊಳಕ್ಕೆ ಹೇಗೆ ಧುಮುಕಬೇಕೆಂದರೆ ಹಾಗೆ ಮಾಡುವಾಗ ನೀರು ತೆಂಗಿನ ಮರದ ಎತ್ತರಕ್ಕೆ ಸಿಡಿಯಬೇಕಂತೆ ! ಆ ಸಮಯದಲ್ಲಿ ಅವನು ಹೊಂದುವ ಪುಣ್ಯವು ಅಧಿಕವಾದ್ದರಿಂದ ಅವನು ಅನಂತರ ಉದಾರವಾಗಿ ದಾನಧರ್ಮಗಳನ್ನು ಮಾಡಬೇಕು.

ಅನಂತರ ತಂದೆಯು ಚಿನ್ನದ ಉಂಗುರವನ್ನು ಜೇನಿನ ಹನಿಯಲ್ಲಿ ಅದ್ದಿ ಆ ಹನಿಯನ್ನು ಮಗುವಿನ ನಾಲಿಗೆಗೆ ಸ್ಪರ್ಶಿಸುತ್ತಾನೆ. ಇದರಿಂದ ಮಗುವಿಗೆ ಮೇಧಾಶಕ್ತಿ ಬರುತ್ತದೆ. ಸುಶ್ರುತನು ಜೇನಿನ ರಸಕ್ಕಿರುವ ಶಕ್ತಿಯನ್ನು ಕೊಂಡಾಡುತ್ತಾನೆ. ಮಗುವಿನ ಹೆಸರಿನಲ್ಲಿ ಶತ್ರುಗಳು ಅಭಿಚಾರ ನಡೆಸದಿರಲು ಮಗುವಿಗೆ 'ರಹಸ್ಯವಾಗಿ' ಹೆಸರನ್ನು ನೀಡಲಾಗುತ್ತದೆ. ಮಗುವಿನ ಮೇಲೆ ಉಸಿರನ್ನು ಬಿಡುವ ಮೂಲಕ ಬ್ರಾಹ್ಮಣರು ಮಗುವು ದೀರ್ಘಾಯುವಾಗಲೆಂದು ಹರಸುತ್ತಾರೆ. "ನಾವು ನೂರು ವರ್ಷ ಬಾಳೋಣ"! "ಕಲ್ಲಿನಂತಿರುವ (ಶತ್ರುಗಳಿಗೆ ) ಕೊಡಲಿಯಾಗು; ಶಾಶ್ವತವಾಗಿ ಚಿನ್ನವಾಗಿರು" ಎಂಬ ಮಂತ್ರದ ಮೂಲಕ ತಂದೆಯು ಮಗುವಿನ ಬಲ, ವೀರ್ಯ ಮತ್ತು ಪ್ರಸಿದ್ಧಿಗೋಸ್ಕರ ಪ್ರಾರ್ಥಿಸುತ್ತಾನೆ. ಕರುಳುಬಳ್ಳಿಯನ್ನು ಕತ್ತರಿಸಿದ ನಂತರ ತಂದೆಯು ವರುಣದೇವನನ್ನು ತಾಯಿಯ ರಕ್ಷಣೆಗಾಗಿ ಪ್ರಾರ್ಥಿಸುವಾಗ ಮಗುವನ್ನು ತಾಯಿಗೆ ಮೊಲೆಯೂಡಿಸಲೆಂದು ಒಪ್ಪಿಸಲಾಗುತ್ತದೆ.

ಈ ಮಹತ್ವಪೂರ್ಣವೂ ಉಪಯುಕ್ತವೂ ಆದ ಸಂಸ್ಕಾರವನ್ನು ಸ್ತ್ರೀಯ ವಿವಾಹ ಅಥವಾ ಬಾಲಕನ ಉಪನಯನ ಸಂಸ್ಕಾರದ ಸಂದರ್ಭಕ್ಕೆ ವರ್ಗಾಯಿಸಿದಲ್ಲಿ ಅದು ಸಂಪೂರ್ಣವಾಗಿ ವ್ಯರ್ಥ.

**ನಾಮಕರಣ**

ಇದೊಂದು ಸರಳ ವಿಧಿ. ಇಲ್ಲಿ ಮಗುವಿಗೆ ಹೆಸರನ್ನು ನೀಡಲಾಗುತ್ತದೆ. ಆಶ್ವಲಾಯನ ಪ್ರಕಾರ ಗಂಡುಮಗುವಿನ ಹೆಸರು ಸಮಸಂಖ್ಯೆಯಲ್ಲಿರಬೇಕು. ಎರಡಕ್ಷರದ ಹೆಸರು ಲೌಕಿಕ ಖ್ಯಾತಿಯನ್ನು ಮತ್ತು ನಾಲ್ಕಕ್ಷರದ ಹೆಸರು ಧಾರ್ಮಿಕ ಖ್ಯಾತಿಯನ್ನು ತರುತ್ತದೆ. ಹೆಣ್ಣುಮಗುವಿನ ಹೆಸರು ಬೆಸಸಂಖ್ಯೆಯಲ್ಲಿರಬೇಕು ಮತ್ತು ಅದು "ಇ" ಅಥವಾ "ಆ" ದಲ್ಲಿ ಕೊನೆಗೊಳ್ಳಬೇಕು. ಅದು ಉಚ್ಚರಿಸಲು ಸುಲಭವಾಗಿರಬೇಕು. ಕಿವಿಗೆ ಇಂಪು ಮತ್ತು ಮಂಗಳಕರವಾಗಿರಬೇಕು. ಅದು ವಕ್ರವಾದ ಸೂಚನೆಗಳನ್ನು ಒಳಗೊಂಡಿರಬಾರದು. ಪಿತೃಗಳ ಹೆಸರನ್ನು ಹಾಗೂ



ಜನ್ಮನಕ್ಷತ್ರಕ್ಕೆ ಅನುಸಾರವಾಗಿಯೂ ಹೆಸರುಗಳನ್ನು ಆಯ್ಕೆ ಮಾಡುವ ಪದ್ಧತಿಯಿದೆ.

ನಕ್ಷತ್ರನಾಮ ಪದ್ಧತಿಯು ಗೃಹ್ಯಸೂತ್ರದಲ್ಲಿದೆ. ಸೂತ್ರವು ಇದರ ಜೊತೆಗೆ ವ್ಯಾವಹಾರಿಕ ನಾಮವನ್ನು ಪ್ರಸ್ತಾಪಿಸುತ್ತದೆ. ಇಷ್ಟದೇವತೆಗಳ ಹೆಸರನ್ನು ನೀಡುವ ಪದ್ಧತಿಯು ಪೌರಾಣಿಕ ಯುಗದಲ್ಲಿ ಪ್ರಾರಂಭವಾಯಿತು. ಭಕ್ತಿಪಂಥವು ಈ ಪದ್ಧತಿಯನ್ನು ಎಷ್ಟು ಜನಪ್ರಿಯಗೊಳಿಸಿತೆಂದರೆ ಮಗುವಿನ ಹೆಸರನ್ನು ಕರೆದಾಗಲೆಲ್ಲ ದೇವರ ಹೆಸರನ್ನು ಉಚ್ಚರಿಸುವ ಸದವಕಾಶವು ನಮಗೆ ಸಿಗುವಂತಾಗುತ್ತದೆಂದು ಭಾವಿಸಲಾಯಿತು. ಈ ವಿಧಾನದ ಫಲಕಾರಿತ್ವವನ್ನು ಸೂಚಿಸಲು ಅಜಾಮಿಳನ ಕಥೆಯನ್ನು ಉಲ್ಲೇಖಿಸಲಾಗಿದೆ. ಹಾಗಾಗಿ ಮಕ್ಕಳ ಹೆಸರನ್ನು ಹ್ರಸ್ವಗೊಳಿಸಿ ಕರೆಯುವುದರಿಂದ ಈ ಅವಕಾಶವು ದುಲರ್ಭವೆಂಬುದು ನಂಬಿಕೆ.

ಸಾಮಾನ್ಯವಾಗಿ ಈ ಸಂಸ್ಕಾರವನ್ನು ಮಗುವು ಹುಟ್ಟಿದ ಹತ್ತು ಅಥವಾ ಹನ್ನೆರಡನೆಯ ದಿನದಂದು ಮಾಡುತ್ತಾರೆ. ಯಾವುದಾದರೂ ಅಡಚಣೆ ಬಂದಲ್ಲಿ ಮಗುವು ಹುಟ್ಟಿದ ವರ್ಷದ ಕೊನೆಯಲ್ಲಿ ಮಾಡುತ್ತಾರೆ.

ಪೂರ್ವಭಾವಿ ಕಾರ್ಯಕ್ರಮಗಳ ನಂತರ ತಂದೆತಾಯಿಗಳು ದೇವತೆಗಳಿಗೆ ನೈವೇದ್ಯವನ್ನು ಅರ್ಪಿಸುತ್ತಾರೆ. ಮಗುವಲ್ಲಿ ಚೇತನವನ್ನು ಜಾಗೃತಿಗೊಳಿಸುವ ಸಂಕೇತವಾಗಿ ತಂದೆಯು ಮಗುವಿನ ಉಸಿರನ್ನು ಸ್ಪರ್ಶಿಸಿ ಅದರ ಕಿವಿಯಲ್ಲಿ ಮೂರು ಬಾರಿ ಹೀಗೆ ಹೇಳುತ್ತಾನೆ. "ನಿನ್ನ ಹೆಸರು................" ಹಿರಿಯರು ಮತ್ತು ಬ್ರಾಹ್ಮಣರು ಮಗುವನ್ನು ಇದೇ ಹೆಸರಿನಿಂದ ಕರೆಯಬೇಕೆಂದು ಮತ್ತು ಅದನ್ನು ಆಶೀರ್ವದಿಸಬೇಕೆಂದು ಕೋರಲಾಗುತ್ತದೆ. ಎಂದರೆ ಮಗುವಿನ ನಾಮಕರಣವನ್ನು ಉಪನಯನ ದಿನಕ್ಕಾಗಲಿ ಅಥವಾ ವಿವಾಹ ದಿನಕ್ಕಾಗಲಿ ಮುಂದೂಡಬಾರದೆಂದು ಇದರ ಅರ್ಥ.

**ಅನ್ನಪ್ರಾಶನ**

ಇದು ಮಗುವಿಗೆ ಮೊದಲಬಾರಿಗೆ ಅನ್ನವನ್ನು ಉಣಿಸುವ ವಿಧಿ. ಉಪನಯನ ಅಥವಾ ವಿವಾಹ ಕಾಲದಲ್ಲಿ ಈ ಸಂಸ್ಕಾರ ಮಾಡುವುದನ್ನು ಊಹಿಸಿಕೊಳ್ಳಿ ! ಈ ವಿಧಿಯಲ್ಲಿ ಮಗುವಿಗೆ ಒಳ್ಳೆಯ ಜೀರ್ಣಶಕ್ತಿ, ಒಳ್ಳೆಯ ಆಲೋಚನೆ ಮತ್ತು ಪ್ರತಿಭೆಗಳನ್ನು ಅನುಗ್ರಹಿಸುವಂತೆ ದೇವತೆಗಳನ್ನು ವೇದಮಂತ್ರಗಳ ಮೂಲಕ ಪ್ರಾರ್ಥಿಸಲಾಗುತ್ತದೆ. ಮಗುವಿಗೆ ೬ ತಿಂಗಳಾದಾಗ ಈ ಸಂಸ್ಕಾರವನ್ನು ಮಾಡುತ್ತಾರೆ. ಇದು ಮಗುವಿಗೆ ಎದೆಹಾಲನ್ನು ಬಿಡಿಸುವ ಕಾಲ. ಸುಶ್ರುತರ ಪ್ರಕಾರ ಇದು ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಬಹಳ ಒಳ್ಳೆಯ ಕಾಲ. ಇಲ್ಲಿ ವಾಕ್ ಮತ್ತು ಬಲಾಭಿಮಾನಿ ದೇವತೆಗಳಿಗೆ ನೈವೇದ್ಯವನ್ನು ಅರ್ಪಿಸುತ್ತಾರೆ. ಅನಂತರ ಮಗುವಿನ ಇಂದ್ರಿಯಪಟುತ್ವಕ್ಕಾಗಿ ಹಾಗೂ ಮಗುವು ಸಂತೃಪ್ತ ಬದುಕನ್ನು ನಡೆಸಲೆಂದು

ಪ್ರಾರ್ಥಿಸಲಾಗುತ್ತದೆ. "ಮಗುವಿಗೆ ಆರೋಗ್ಯವನ್ನು ನೀಡುವ ಮತ್ತು ಅನಾರೋಗ್ಯವನ್ನು ತಪ್ಪಿಸುವ ತೀರ್ಥಗಳನ್ನು ಹಾಗೂ ಮೂಲಿಕೆಗಳನ್ನು ಮಗುವಿಗೆ ಉಣ್ಣಿಸುತ್ತಿದ್ದೇನೆ" ಎಂದು ಉಚ್ಚರಿಸುತ್ತಾ ತಂದೆಯು ಮಗುವಿಗೆ ಚಿನ್ನದ ಉಂಗುರವನ್ನು ಸ್ವಲ್ಪ ಸಿಹಿಯಲ್ಲಿ ಅದ್ದಿ ಆ ಸಿಹಿಯನ್ನು ಮಗುವಿಗೆ ತಿನ್ನಿಸುತ್ತಾನೆ.

ಈ ಸಂಸ್ಕಾರದ ಫಲಾಫಲಗಳೇನೇ ಇರಲಿ, ಅದನ್ನು ಆಚರಿಸುವುದರಿಂದ ಮಗುವಿಗೆ ಆ ಕಾಲದ ಒಟ್ಟು ಅಗತ್ಯಗಳೇನೆಂಬುದರ ವೈಜ್ಞಾನಿಕ ಅರಿವು ಸಂಬಂಧಪಟ್ಟವರಲ್ಲಿ ಹಂತಹಂತವಾಗಿ ಮೂಡಿಸುತ್ತದೆ. ಆದ್ದರಿಂದ ಅದನ್ನು ವ್ಯವಸ್ಥಿತವಾಗಿ, ಅದರಲ್ಲೂ ವಿಶೇಷವಾಗಿ ಮಂತ್ರಸಹಿತವಾಗಿ ಆಚರಿಸಿದಾಗ ಅದು ನಿರೀಕ್ಷಿತ ಫಲವನ್ನು ನೀಡುವುದೆಂಬುದರಲ್ಲಿ ಸಂದೇಹವಿಲ್ಲ.

**ಚೌಲ**

ಇದು ಮಗುವಿಗೆ ಮೊಟ್ಟಮೊದಲು ಕೂದಲನ್ನು ಕತ್ತರಿಸುವ ಶಾಸ್ತ್ರ. ಈ ಶಾಸ್ತ್ರವನ್ನು ಮೂರನೆಯ ವಯಸ್ಸಿನಲ್ಲಿ ಮಾಡಬೇಕು. ತಲೆಹುಣ್ಣು ಮುಂತಾದ ಅಪವಾದ ಸಂದರ್ಭಗಳ ಹೊರತಾಗಿ ಈ ವಯಸ್ಸಿಗೆ ಮೊದಲು ಚೌಲವು ನಿಷಿದ್ಧ. ಆ ವಯಸ್ಸಿನ ನಂತರ ಧಾರ್ಮಿಕ ಅಗತ್ಯವಾಗಿ "ಶಿಖೆ" ಯನ್ನು ಬಿಡಲು ಅದು ಅನುಮತಿ ನೀಡುತ್ತದೆ. ಸುಶ್ರುತನ ಪ್ರಕಾರ ಶಿಖೆ ಅಥವಾ ತಲೆಮೇಲಿನ ಕೂದಲಿನ ಜುಟ್ಟು ತಲೆಯೊಳಗಿನ ಅತ್ಯಂತ ಮುಖ್ಯ ಅಥವಾ ಸೂಕ್ಷ್ಮಭಾಗವನ್ನು ರಕ್ಷಿಸುತ್ತದೆ. ಕೆಲವರು (ಗಂಡು ಮಕ್ಕಳಿಗೆ) ಚೌಲವನ್ನು ಉಪನಯನದ ವೇಳೆಗೆ ಮಾಡುತ್ತಾರೆ. ಇದು ಸರಿಯಲ್ಲ. ಕಾರಣ ಮಗುವಿಗೆ ದೀರ್ಘಾಯಸ್ಸನ್ನು ಖಚಿತಪಡಿಸುವುದು ಈ ಸಂಸ್ಕಾರದ ಉದ್ದೇಶಗಳಲ್ಲಿ ಒಂದು. ಕೂದಲು ಮತ್ತು ಉಗುರುಗಳನ್ನು ತೆಗೆಯುವುದರಿಂದ ವ್ಯಕ್ತಿಗೆ ಬಲ, ವೀರ್ಯ, ದೀರ್ಘಾಯಸ್ಸು, ಪರಿಶುದ್ಧಿ ಮತ್ತು ಸೌಂದರ್ಯ ಹೆಚ್ಚಾಗುವುದೆಂದು ಸುಶ್ರುತ ಮತ್ತು ಚರಕರು ಹೇಳುತ್ತಾರೆ. ವ್ರತಾಚರಣೆಯ ಅಂಶವು ನಂತರದ ಬೆಳವಣಿಗೆಯಷ್ಟೇ.

ಮೊದಲು ಈ ಶಾಸ್ತ್ರಕ್ಕೆ ಒಳ್ಳೆಯ ದಿನವನ್ನು ಆಯ್ದುಕೊಂಡು ಪೂರ್ವವಿಧಿಗಳನ್ನು ನಡೆಸಬೇಕು. ಈ ವಿಧಿಯಲ್ಲಿ ಬಳಸುವ ನಿರ್ದಿಷ್ಟ ಸಾಮಗ್ರಿಗಳೆಂದರೆ ಮುಳ್ಳುಹಂದಿಯ ಗರಿ ಮತ್ತು ಒಂದು ನಕಲಿ ಚಾಕು. ಇಲ್ಲಿ ತಂದೆಯು ಮಗುವಿನ ಕೂದಲನ್ನು ಸಾಂಕೇತಿಕವಾಗಿ ಕತ್ತರಿಸಿ ಅದನ್ನು ವಿವಿಧ ದಿಕ್ಕುಗಳಲ್ಲಿ ಎಸೆಯುತ್ತಾನೆ. ಇಲ್ಲಿ ಉಚ್ಚರಿಸುವ ಮಂತ್ರಗಳ ಅರ್ಥ ಹೀಗಿದೆ: "ಮಗುವು ನೂರು ವರ್ಷಕ್ಕೂ ಹೆಚ್ಚು ಸುದೀರ್ಘವಾಗಿ ಬಾಳಲಿ, ಅವನ ಇಂದ್ರಿಯ ಪಟುತ್ವವು ಸಡಿಲವಾಗದಿರಲಿ. ಇತರರಿಗೆ ಉದಾರವಾಗಿ ಅನ್ನದಾನ ಮಾಡಲೆಂದು ಅವನು ಸಿರಿ ಸಮೃದ್ಧಿಗಳನ್ನು ಹೊಂದಲಿ. ಆತನ ಜೀರ್ಣಶಕ್ತಿಯು ಪೂರ್ಣವಾಗಿರಲಿ. ಅವನು ವರ್ಚಸ್ವಿಯಾಗಿರಲಿ".



**ಉಪನಯನ**

ಯಜ್ಞೋಪವೀತಧಾರಣೆಯ ಸಂಸ್ಕಾರವನ್ನು ಮೊದಲ ಮೂರು ವರ್ಣಗಳಿಗೆ, ಗರ್ಭಧಾರಣೆಯ ದಿನದಿಂದ ಕ್ರಮವಾಗಿ ೮, ೧೧ ಮತ್ತು ೧೨ನೇ ವರ್ಷದಲ್ಲಿ ಮಾಡುತ್ತಾರೆ. ಕೆಲವರ ಪ್ರಕಾರ ಉಪನಯನ ಪದದ ಮೂಲಾರ್ಥ ಮಗುವನ್ನು ಗುರುವಿನ ಬಳಿಗೆ ಅಥವಾ ಗಾಯತ್ರೀಮಂತ್ರದೆಡೆಗೆ ಒಯ್ಯುವುದೆಂದು. ಈ ಸಂಸ್ಕಾರವು ಮಗುವಿಗೆ ಎರಡನೇ ಜನ್ಮವನ್ನು ನೀಡುತ್ತದೆ. ಎಂದರೆ ಇಲ್ಲಿ ಗುರುವು ವಟುವಿಗೆ ತಂದೆಯ ಸಮಾನನಾದರೆ ಗಾಯತ್ರೀ ಮಂತ್ರವು ತಾಯಿಯಾಗುತ್ತಾಳೆ. ಬಾಲಕನು ಇಲ್ಲಿ ವೇದಾಧ್ಯಯನಕ್ಕೆ ಮತ್ತು ವೈದಿಕಕರ್ಮಗಳ ಆಚರಣೆಗೆ ಅರ್ಹನಾಗುತ್ತಾನೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವನು ಮೊದಲು ತಾನು ನಡೆಸುತ್ತಿದ್ದ ಮೃಗೀಯ ಬದುಕಿಗೆ ವಿಭಿನ್ನವಾದ ಆಧ್ಯಾತ್ಮಿಕ ಯಾತ್ರೆಯನ್ನು ಕೈಗೊಳ್ಳಲು ಪ್ರಾರಂಭಿಸುತ್ತಾನೆ. ಒಂದು ಆದರ್ಶ ಬದುಕಿಗೆ ಗುರುಕುಲ ಪರಿಸರವು ಅವನ ಶೈಕ್ಷಣಿಕ ಜೀವನಕ್ಕೆ ಹೊಂದುತ್ತದೆ.

ಮಂತ್ರಗಳಲ್ಲೆಲ್ಲಾ ಗಾಯತ್ರೀ ಮಂತ್ರವು ಅತಿ ಪ್ರಬಲವಾದುದು. ಅದು ಎಲ್ಲ ವೇದಮಂತ್ರಗಳ ಸಾರ. ಆದ್ದರಿಂದಲೇ ಅದರ ಉಪದೇಶವನ್ನು "ಬ್ರಹ್ಮೋಪದೇಶ" ಎಂದು ಕರೆಯುವುದು. ಎಂದರೆ ಅದರ ಅನುಸಂಧಾನವು ಬ್ರಹ್ಮಸಾಕ್ಷಾತ್ಕಾರಕ್ಕೆ ಒಯ್ಯುತ್ತದೆ. ಈ ಮಂತ್ರದೊಡನೆ ಗುರುವು ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಬಾಲಕನಿಗೆ ರವಾನಿಸುತ್ತಾನೆ. ಆದ್ದರಿಂದಲೇ ಗುರುಶಿಷ್ಯರಿಗತ್ತಾರೆ. ಉಪದೇಶದ ವೇಳೆಯಲ್ಲಿ ರೇಷ್ಮೆವಸ್ತ್ರದಿಂದ ಮುಚ್ಚಲ್ಪಡುಬ್ಬರೂ.

ಉಪನಯನ ಸಂಸ್ಕಾರದಲ್ಲಿ ಬಳಸಲಾಗುವ ಸಾಮಗ್ರಿಗಳಿಗೆ ಆಧ್ಯಾತ್ಮಿಕ ಮಹತ್ವವಿದೆ. ಯಜ್ಞೋಪವೀತವು ಮೂರು ಎಳೆಗಳಿಂದ ಕೂಡಿರುತ್ತದೆ. ಇದು ಸತ್ವರಜಸ್ತಮೋಗುಣಗಳನ್ನು ಸೂಚಿಸುತ್ತದೆ. ಇದು ಋಣತ್ರಯವನ್ನೂ ನೆನಪಿಸುತ್ತದೆ. ಎಂದರೆ ಮನುಷ್ಯನು ಪಿತೃಗಳು, ಋಷಿಗಳು ಮತ್ತು ದೇವತೆಗಳಿಗೆ ಸಲ್ಲಿಸಬೇಕಾದ ಮೂರು ಋಣಗಳನ್ನೂ ; ಬ್ರಹ್ಮ, ವಿಷ್ಣು ಮತ್ತು ಶಿವ ಎಂಬ ತ್ರಿಮೂರ್ತಿಗಳನ್ನೂ ಹಾಗೂ ಪ್ರಣವ ಮಂತ್ರದ ಅ, ಉ ಮತ್ತು ಮ ಎಂಬ ಮೂರಕ್ಷರಗಳನ್ನೂ ಸೂಚಿಸುತ್ತದೆ. ವಟುವು ಇದನ್ನು ಧರಿಸುವಾಗ ಆಚಾರ್ಯನು ವಟುವಿಗೆ ಬಲ, ಜ್ಞಾನ ಮತ್ತು ದೀರ್ಘಾಯಸ್ಸನ್ನು ಕೋರುತ್ತಾನೆ. ಯಜ್ಞೋಪವೀತಕ್ಕೆ ಕಟ್ಟಲಾಗಿರುವ ಜಿಂಕೆ ಚರ್ಮದ (ಕೃಷ್ಣಾಜಿನ) ಚೂರು ಆಧ್ಯಾತ್ಮಿಕ ಮತ್ತು ಬೌದ್ಧಿಕ ಸಾರ್ವೋತ್ಕೃಷ್ಟತೆಯನ್ನು ಸೂಚಿಸುತ್ತದೆ. ಕೌಪೀನವು ಅಮರತೆಯ ಸಂಕೇತ. ಮೇಖಲವು (ಉಡುದಾರ) ವಟುವು ಮೂರು ವೇದಗಳಿಂದ ಸುತ್ತುವರೆಯಲ್ಪಟ್ಟಿದ್ದಾನೆಂಬುದನ್ನು ಸೂಚಿಸುತ್ತದೆ. ಮೇಖಲೆಯು "ಶ್ರದ್ಧೆಯ ಮಗಳು ಮತ್ತು ಋಷಿಗಳ ಸೋದರಿ" : ಆಕೆಯು ವಟುವಿನ ಶುದ್ಧತೆಯನ್ನು ಕಾಪಾಡಿ, ಅವನಿಗೆ ಕೆಟ್ಟದ್ದನ್ನು ನಿವಾರಿಸುತ್ತಾಳೆ.

ವಟುವು ಕೈಯಲ್ಲಿ ಹಿಡಿಯುವ ಪಲಾಶದಂಡವು ಅವನು ವೇದಗಳ ರಕ್ಷಕ (ಕಾವಲುಗಾರ) ಎಂಬುದನ್ನು ಸೂಚಿಸುತ್ತದೆ. ಅದು ಅವನಿಗೆ ದೀರ್ಘಾಯುಸ್ಸನ್ನು, ತೇಜಸ್ಸನ್ನು ಮತ್ತು ಪಾವಿತ್ರ್ಯವನ್ನು ನೀಡುತ್ತದೆ.

ಸಾಮಾನ್ಯವಾಗಿ ವಟುವಿಗೆ ಗಾಯತ್ರೀ ಮಂತ್ರವನ್ನು ಉಪದೇಶಿಸುವವನು ತಂದೆಯೇ. ಹಾಗೆ ಮಂತ್ರವನ್ನು ಉಪದೇಶಿಸುವ ಮುನ್ನ ತಂದೆ ಅಥವಾ ಗುರುವು ಬಾಲಕನ ಅಂಜಲಿ ಬದ್ಧ ಕೈಯೊಳಗೆ ನೀರನ್ನು ಹಾಕುತ್ತಾನೆ. ಇದು ಮಂತ್ರೋಪದೇಶವನ್ನು ಪಡೆಯುವ ಮುನ್ನ ಬಾಲಕನನ್ನು ಶುದ್ಧೀಕರಿಸುವ ಸಂಕೇತ.

ಬಾಲಕನನ್ನು ಸೂರ್ಯನನ್ನು ನೋಡಲು ಆದೇಶಿಸುವಾಗ ಅವನು ಸೂರ್ಯನಿಂದ ಅಚಲವಾದ ಕರ್ತವ್ಯ ನಿಷ್ಠೆ, ಮತ್ತು ಶಿಸ್ತನ್ನು ಕಲಿಯಬೇಕೆಂದು ಹಾಗೂ ಸದ್ಗುಣಪ್ರಾಪ್ತಿಗಾಗಿ ಸೂರ್ಯನನ್ನು ಪ್ರಾರ್ಥಿಸಬೇಕೆಂದು ಬೋಧಿಸಲಾಗುತ್ತದೆ. ಬಾಲಕನು ಒಂದು ಕಲ್ಲುಬಂಡೆಯನ್ನು ಏರುವುದರ ಸಂಕೇತ ಅವನು ತನ್ನ ಕರ್ತವ್ಯ ಮತ್ತು ಅಧ್ಯಯನಗಳಲ್ಲಿ ದೃಢ ಸಂಕಲ್ಪವನ್ನು ಹಾಗೂ ಸ್ಥಿರ ಬುದ್ಧಿಯನ್ನು ಬೆಳೆಸಿಕೊಳ್ಳಬೇಕೆಂಬುದು. ಅಲ್ಲದೆ ಇದರ ಸಂಕೇತ ಬಾಲಕನು ದೈಹಿಕ ಶಕ್ತಿ ಮತ್ತು ಪರಿಪೂರ್ಣ ಆರೋಗ್ಯವನ್ನು ಬೆಳೆಸಿಕೊಳ್ಳಬೇಕೆಂಬುದೂ ಆಗಿದೆ.
ಉಪನಯನ ಕಾಲದಲ್ಲಿ ಕೆಲವು ವ್ರತಸಂಕಲ್ಪಗಳನ್ನು ಮಾಡುತ್ತಾರೆ:

(೧) ಮೊದಲನೆಯದಾಗಿ ವ್ರತಪರಿಪಾಲನೆಯೇ ಒಂದು ವ್ರತ
(೨) ಜಗತ್ತಿನಲ್ಲಿ ಪ್ರಾಮುಖ್ಯತೆಯನ್ನು ಪಡೆಯುವ
(೩) ಸೃಜನಶೀಲ ಕಾರ್ಯಗಳಲ್ಲಿ ತೊಡಗುವ
(೪) ದಾನ ಮಾಡುವ
(೫) ದೇವತೆಗಳನ್ನು ಸುಪ್ರೀತಗೊಳಿಸುವ
(೬) ಸಂಗಡಿಗರನ್ನು ಪ್ರೀತಿಗೊಳಿಸುವ
(೭) ಪ್ರಜೆಗಳನ್ನು ಇಲ್ಲವೇ ತನ್ನನ್ನು ಅವಲಂಬಿಸಿದವರನ್ನು ರಕ್ಷಿಸುವ
(೮) ವಿವಾಹವಾಗಿ ಸಂತಾನವನ್ನು ಅಭಿವೃದ್ಧಿಗೊಳಿಸುವ
(೯) ಸಮಾಧಾನದಿಂದಿರುವ
(೧೦) ಹಿರಿಯರನ್ನು ಸೇವಿಸುವ ಇತ್ಯಾದಿ ವ್ರತಗಳು.

ಈ ವಿಧಿಯಲ್ಲಿ ಬರುವ ಪ್ರಣವ, ಮೇಧಾ ಮತ್ತು ಶ್ರದ್ಧಾ – ದೇವರು, ಬುದ್ಧಿಶಕ್ತಿ ಮತ್ತು ಶ್ರದ್ಧೆ ಈ ಮೂರನ್ನು ಕುರಿತ ಪ್ರಾರ್ಥನಾಮಂತ್ರಗಳು ಬ್ರಹ್ಮಚರ್ಯವೆಂಬ ಕಟ್ಟಡದ ಅಡಿಗಲ್ಲುಗಳಾಗಿವೆ. ದಿನನಿತ್ಯದ ಈ ಆಚರಣೆಯು ಆಹ್ನಿಕವೆಂದು (ಸಂಧ್ಯೆ, ಸಮಿದಾಧಾನ ಇತ್ಯಾದಿ) ಹೇಳಲ್ಪಡುವ ಸದಾಚಾರಗಳಿಂದ ನಿಯಂತ್ರಿತವಾಗಿದೆ. ಸಚ್ಚಾರಿತ್ರ್ಯದ ಬೆಳವಣಿಗೆಗೆಂದು ಬಾಲ್ಯದಲ್ಲಿ ಯೋಚಿಸಲಾದ ಇದಕ್ಕಿಂತಲೂ ವೈಚಾರಿಕವೂ ವ್ಯವಸ್ಥಿತವೂ ಆದ ವೇಳಾಪಟ್ಟಿಯನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.



**ವಿವಾಹ**

ಮದುವೆಯಲ್ಲಿ ಕನ್ಯೆಯನ್ನು ಹುಡುಗನಿಗೆ (ದಾನವಾಗಿ) ನೀಡುವುದು ಪುಣ್ಯಕರವೆಂದು ಭಾವಿಸಲಾಗಿದೆ. ವಾಸ್ತವವಾಗಿ ಇಲ್ಲಿ ಹುಡುಗ ಅಥವಾ ವರನನ್ನು ಶ್ರೀ ಮಹಾವಿಷ್ಣುವೆಂದೇ ಪರಿಗಣಿಸುತ್ತಾರೆ. ಸರಿಯಾಗಿ ಆಚರಿಸಿದಲ್ಲಿ ವಿವಾಹ ಸಂಸ್ಕಾರವು ಎಷ್ಟು ಪುಣ್ಯಕರವೆಂದರೆ ಅದು ವಧುವಿನ ತಂದೆತಾಯಿಗಳಿಗೆ ಸತತವಾಗಿ ೨೧ ಜನ್ಮಗಳವರೆಗೆ ಪುಣ್ಯಫಲವನ್ನು ನೀಡುತ್ತಲೇ ಇರುತ್ತದೆ.

ಹಿಂದೂಗಳಲ್ಲಿ ಸಗೋತ್ರ ವಿವಾಹವು ನಿಷಿದ್ಧ. ಈ ವ್ಯವಸ್ಥೆಯ ದುಷ್ಪರಿಣಾಮವನ್ನು ಸಂತಾನಶಾಸ್ತ್ರವು (eugenics) ದೃಢಪಡಿಸುತ್ತದೆ. ಮಂಗಳ ಕಾರ್ಯಗಳಲ್ಲಿ ಬಳಸುವ ಅರಿಶಿನದ ಪುಡಿಗೆ ಕ್ರಿಮಿನಾಶಕ ಶಕ್ತಿಯಿದೆ. ಅಲ್ಲದೆ ಆ ಬಣ್ಣಕ್ಕೆ ಮನುಷ್ಯನ ಮೇಲೆ ಮನೋವೈಜ್ಞಾನಿಕವಾಗಿ ಪರಿಣಾಮ ಬೀರಬಲ್ಲ ಶಕ್ತಿಯಿದೆ.

ಗೃಹಸ್ಥಾಶ್ರಮಕ್ಕೆ ಸಂಬಂಧಿಸಿದ ಧರ್ಮವನ್ನಾಚರಿಸುವುದು ವಿವಾಹದ ಮುಖ್ಯ ಉದ್ದೇಶ. ಇಲ್ಲಿ ಪುತ್ರಪ್ರಾಪ್ತಿಯನ್ನು ಇಂದ್ರಿಯಸುಖಕ್ಕಿಂತಲೂ ಹೆಚ್ಚಾಗಿ ಪಿತೃ ಋಣವನ್ನು ತೀರಿಸಬೇಕಾದ ಒಂದು ಕರ್ತವ್ಯವೆಂದು ವಿಧಿಸಲಾಗಿದೆ.

ವಿವಾಹ ಸಮಾರಂಭದಲ್ಲಿ ಅನೇಕ ಆಚರಣೆಗಳಿದ್ದು ಆ ಆಚರಣೆಗಳಿಗೆ ತಮ್ಮದೇ ಆದ ಸಂಕೇತಗಳಿವೆ. ವರನು ವಧುವಿನ ಕೈಯನ್ನು ಹಿಡಿದುಕೊಳ್ಳುವುದು ಪಾಣಿಗ್ರಹಣ. ಇದು ವಧೂವರರಿಗೆ ಏರ್ಪಡುವ ನೂತನಸಂಬಂಧವನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ವರನು ಉಚ್ಚರಿಸುವ ಮಂತ್ರವೊಂದರ ಅರ್ಥ ಹೀಗಿದೆ: "ಸುಖಕ್ಕೋಸ್ಕರ ನಾನು ನಿನ್ನ ಕೈಹಿಡಿಯುತ್ತೇನೆ. ನೀನು ನಿನ್ನ ಪತಿಯಾದ ನನ್ನೊಂದಿಗೆ ದೀರ್ಘವೃದ್ಧಾಪ್ಯದವರೆಗೆ ಜೀವಿಸು. ನನ್ನ ಮನೆಯನ್ನು ಆಳಲು (ನಡೆಸಲು) ದೇವತೆಗಳು ನಿನ್ನನ್ನು ನನಗೆ ನೀಡಿದ್ದಾರೆ. ನೀನು ನನ್ನ ಮನೆಯ ರಾಣಿಯಾಗಿದ್ದೀಯೆ. ನಾನು ಸಾಮನ್ ಆದರೆ ನೀನು ಋಕ್, ನಾನು ಸ್ವರ್ಗವಾದರೆ ನೀನು ಭೂಮಿ, ಬಾ ನಾವು ವಿವಾಹವಾಗೋಣ." ಹೃದಯಮಿಲನವನ್ನು ಸೂಚಿಸಲು ವರನು ವಧುವಿನ ಹೃದಯವನ್ನು ಸ್ಪರ್ಶಿಸುತ್ತಾ ಹೀಗೆ ಹೇಳುತ್ತಾನೆ. "ನಾನು ನಿನ್ನ ಹೃದಯವನ್ನು ನನ್ನ ಹೃದಯದೊಳಗೆ ಇರಿಸಿಕೊಳ್ಳುತ್ತೇನೆ. ನಿನ್ನ ಮನಸ್ಸು ನನ್ನ ಮನಸ್ಸಿನೊಳಗೆ ಜೀವಿಸಲಿ ; ನನ್ನ ಮಾತಿನಲ್ಲಿ ನೀನು ನಿನ್ನ ಹೃದಯದೊಂದಿಗೆ ಆನಂದಪಡುವಂತಾಗಲಿ; ದೇವರು ನಿನ್ನನ್ನು ನನ್ನೊಂದಿಗೆ ಒಂದುಗೂಡಿಸಲಿ." ಸ್ಥಾಲೀಪಾಕವಿಧಿಯಲ್ಲಿ ವರನು ಹೀಗೆ ಹೇಳುತ್ತಾನೆ: "ನಾನು ನನ್ನ ಉಸಿರನ್ನು ನಿನ್ನ ಉಸಿರಿಗೆ ಬೆರೆಸುತ್ತೇನೆ ; ನನ್ನ ಮಜ್ಜೆಮಾಂಸಗಳನ್ನು ನಿನ್ನೊಂದಿಗೆ

ಒಂದುಗೂಡಿಸುತ್ತೇನೆ; ನನ್ನ ಚರ್ಮವು ನಿನ್ನ ಚರ್ಮದೊಂದಿಗೆ ಬೆರೆಯಲಿ".

ವಧುವು ಕಲ್ಲುಬಂಡೆಯನ್ನು ತುಳಿಯುವಾಗ (ಅಶ್ಮಾರೋಹಣ) ವರನು ಆಕೆಯಿಂದ ಪ್ರೀತಿ ಮತ್ತು ದೈಹಿಕ ದೃಢತೆಯನ್ನು ನಿರೀಕ್ಷಿಸುತ್ತಾ ಆಕೆಗೆ "ಬಂಡೆಯಂತೆ ಗಟ್ಟಿಯಾಗಿರು" ಎಂದು ಹೇಳುತ್ತಾನೆ. ಧ್ರುವನಕ್ಷತ್ರವನ್ನು ಆಕೆಗೆ ತೋರಿಸುತ್ತಾ ಹೀಗೆ ಹೇಳುತ್ತಾನೆ: "ನೀನು ಸ್ಥಿರಳು. ದೃಢಳಾದ ನಿನ್ನನ್ನು ನಾನು ದಿಟ್ಟಿಸುತ್ತಿದ್ದೇನೆ. ಎಲೈ ಸಮೃದ್ಧಳೇ, ಸ್ಥಿರವಾಗಿರು. ನಿನ್ನ ಪತಿಯಾದ ನನಗೆ ದೇವರು ಮಕ್ಕಳ ಪಡೆಯಲು ನಿನ್ನನ್ನು ನೀಡಿದ್ದಾನೆ. ನನ್ನೊಂದಿಗೆ ನೂರು ಶರತ್ಕಾಲ ಜೀವಿಸು." ಸಾಹಚರ್ಯಕ್ಕೋಸ್ಕರ ವರನು ಸರಸ್ವತೀ ದೇವಿಯನ್ನು ಹೀಗೆ ಪ್ರಾರ್ಥಿಸುತ್ತಾನೆ: "ಹೇ ದಯಾಮಯಿ ! ನಾನು ಸ್ತ್ರೀಯ ಮಹಿಮೆಯನ್ನು ಕೊಂಡಾಡುತ್ತೇನೆ. ಈ ಕಾರ್ಯವು ನೆರವೇರುವಂತೆ ಮಾಡು."

ಲಾಜಾಹೋಮ ಅಥವಾ ಅಗ್ನಿಗೆ ಅರಳನ್ನು ಆಹುತಿಯಾಗಿ ನೀಡುವ ವಿಧಿಯಲ್ಲಿ ವಧುವು ಹೀಗೆ ಪ್ರಾರ್ಥಿಸುತ್ತಾಳೆ: "ನನ್ನ ಪತಿಯು ದೀರ್ಘಾಯುವಾಗಲಿ, ನನ್ನ ಸಂಬಂಧಗಳು ವೃದ್ಧಿಸಲಿ, ಈ ಧಾನ್ಯಗಳು ನಮಗೆ ಸಮೃದ್ಧಿಯನ್ನು ತರಲಿ ಮತ್ತು ನಮ್ಮನ್ನು ಒಂದಾಗಿಸಲಿ!"

ಸಪ್ತಪದಿ ಅಥವಾ ಏಳು ಹೆಜ್ಜೆ ನಡೆಯುವ ವಿಧಿಯ ಹಂತಹಂತವಾದ ಸಮೃದ್ಧಿ ಸಾಧನೆಯ ಬಯಕೆಯನ್ನು ಸಂಕೇತಿಸುತ್ತದೆ. ಈ ಸಂದರ್ಭದಲ್ಲಿ ಪತಿಯು ಹೇಳುವ ಮಂತ್ರವು ಹೀಗಿದೆ : "ಮೊದಲ ಹೆಜ್ಜೆ ವೀರ್ಯಕ್ಕೆ, ಎರಡನೇ ಹೆಜ್ಜೆ ರಸಕ್ಕೆ, ಮೂರನೆಯ ಹೆಜ್ಜೆ ಐಶ್ವರ್ಯಕ್ಕೆ, ನಾಲ್ಕನೆಯದು ಸುಖಕ್ಕೆ, ಐದನೆಯದು ಪಶುಗಳಿಗೆ, ಆರನೆಯದು ಋತುಗಳಿಗೆ, ಮತ್ತು ಏಳು ಹೆಜ್ಜೆಗಳೊಂದಿಗೆ ನೀನು ನನ್ನೊಂದಿಗೆ ಒಂದಾಗಿರು ಮತ್ತು ನನಗೆ ನಿಷ್ಠಳಾಗಿರು".

ನವದಂಪತಿಗಳು ಪರಸ್ಪರ ನೋಡುವಾಗ ವಧುವಿನ ತಂದೆಯು ಹೇಳುತ್ತಾನೆ: "ಕರುಣೆ ಮತ್ತು ಹಿತಕರವಾದ ಕಣ್ಣುಳ್ಳವಳಾಗು, ಎಂದಿಗೂ ನಿನ್ನ ಪತಿಯ ಬಗ್ಗೆ ಕೆಟ್ಟ ಆಲೋಚನೆ ಮಾಡಬೇಡ. (ಮನೆಯ) ದನಕರುಗಳು ಮತ್ತು ಇತರ ಅವಲಂಬಿಗಳ ಬಗ್ಗೆ ಕರುಣೆ ಸಮಾಧಾನಗಳಿಂದ ಕೂಡಿರು. ಯಾವಾಗಲೂ ನಗುನಗುತ್ತಿರು. ವೀರ್ಯವಂತರ ಮಕ್ಕಳ ತಾಯಿಯಾಗು. ದೇವತಾ ಯಜ್ಞಗಳನ್ನು ಮಾಡು. ಆನಂದದಿಂದಿರು. ನಮಗೆ ಮತ್ತು ನಮ್ಮ ದನಕರುಗಳಿಗೆ ಅದೃಷ್ಟವನ್ನು ತಾ."

ವಿವಾಹ ಶಬ್ದದ ಮೂಲಾರ್ಥ: "ಆಧಾರ ಅಥವಾ ಅವಲಂಬನೆಯನ್ನು ನೀಡು". ಯಾವುದಕ್ಕೆ ಆಧಾರವನ್ನು ನೀಡುವುದು ಎಂಬುದು ಪ್ರಶ್ನೆ. ಧರ್ಮವೆಂಬುದೇ ಇದಕ್ಕೆ ಉತ್ತರ. ಎಂದರೆ ವಿವಾಹಶಬ್ದದಲ್ಲಿ ವಿವಾಹ ವಿಧಿಯ ಪೂರ್ಣಾರ್ಥ ಅಡಗಿದೆ.



ಆಶ್ರಮನಿಯಮಗಳಿಗೆ ಅನುಸಾರವಾಗಿ ಗೃಹವನ್ನು ನಡೆಸಬೇಕೆಂದರೆ ಒಬ್ಬನು ಸಹಿಷ್ಣುತೆ, ತ್ಯಾಗ, ಪರೋಪಕಾರವೇ ಮುಂತಾದ ಎಲ್ಲ ಸದ್ಗುಣಗಳನ್ನೂ ಹೊಂದಬೇಕೆಂದರ್ಥ. ಹೀಗೆ ಭ್ರೂಣ ಹಂತದಿಂದ ಪ್ರಾರಂಭವಾದ ಮಾನವನ ವ್ಯಕ್ತಿತ್ವದ ವಿಕಾಸವು ವಿವಾಹ ಸಂಸ್ಕಾರದಲ್ಲಿ ಕೊನೆಗೊಳ್ಳುತ್ತದೆ.

**ಅಂತ್ಯೇಷ್ಟಿ**

ಬೌಧಾಯನನ ಪ್ರಕಾರ ಬದುಕಿರುವಾಗ ನಾವು ಆಚರಿಸುವ ಸಂಸ್ಕಾರಗಳು ಇಹವನ್ನು ಗೆಲ್ಲಲು ನೆರವಾಗುತ್ತವಾದರೆ ಸತ್ತ ನಂತರ ಆಚರಿಸುವ ಸಂಸ್ಕಾರಗಳು ಸ್ವರ್ಗವನ್ನು ಗೆಲ್ಲಲು ನೆರವಾಗುವುವು.

ಬದುಕು ಸಾವುಗಳು ನಿರಂತರ ಪ್ರಕ್ರಿಯೆಗಳಾಗಿವೆ. ಶವದಹನವೇ ಅಂತಿಮವಲ್ಲ. ಯಮಲೋಕದಲ್ಲಿ ಹೊಸದೊಂದು ಶರೀರವನ್ನು ಪಡೆದು ಪಿತೃಗಳ ಸಾಲಿಗೆ ಸೇರಲು ಅದು ನೆರವಾಗುವ ಸಾಧನ.

ಈ ಸಂದರ್ಭದಲ್ಲಿ ವೈತರಣಿಯೆಂಬ ಹಸುವನ್ನು ದಾನ ನೀಡುವ ಶಾಸ್ತ್ರವೂ ಮತ್ತೊಂದು ಸಾಧನೆ. ಆಕೆಯು ಪ್ರೇತವನ್ನು ಪಾತಾಳಲೋಕವನ್ನು ದಾಟಿಸಿ ಒಯ್ಯುವವಳು. ಮುಖ್ಯ ದುಃಖಿತಪ್ತನು (ಕರ್ತೃ) ಹೀಗೆ ಪ್ರಾರ್ಥಿಸುತ್ತಾನೆ: "ಅಂಧತಮಸ್ಸಿನ ರಕ್ಷಕನಾದ ಪೂಷಣನು ನಿನ್ನನ್ನು ಹೊತ್ತೊಯ್ಯುತ್ತಾನೆ. ಅಗ್ನಿಯು ನೀನೆಲ್ಲಿಗೆ ಹೋಗಬೇಕಿದೆಯೋ ಅಲ್ಲಿಗೆ ಒಯ್ಯಲಿ."

ಅಂತ್ಯಕ್ರಿಯೆಯನ್ನು ಒಂದು ಯಜ್ಞವೆಂದು ಭಾವಿಸಲಾಗಿದೆ. ಮಂತ್ರವು ಹೀಗೆ ಹೇಳುತ್ತದೆ: "ಎಲೈ ಅಗ್ನಿಯೇ, ಈ ಶರೀರವನ್ನು ಕೆಂಡಕ್ಕೆ ಆಹುತಿಯಾಗಿಸಬೇಡ. ಅದಕ್ಕೆ ನೋವನ್ನಾಗಲೀ ಅದರ ಚರ್ಮ ಅಥವಾ ಅಂಗಗಳನ್ನು ಚೆಲ್ಲಾಪಿಲ್ಲಿ ಚದುರಿಸುವುದಾಗಲಿ ಮಾಡಬೇಡ. ಎಲೈ ಜಾತವೇದನೇ, ಶರೀರವು ಸುಟ್ಟಮೇಲೆ ಅದರ ಆತ್ಮವನ್ನು ಪಿತೃಗಳಿಗೆ ಒಪ್ಪಿಸು."

ಹೃದಯಸ್ಪರ್ಶಿ ಮಂತ್ರವೊಂದು ಹೀಗಿದೆ: "ಚಕ್ಷುಗಳು ಸೂರ್ಯನನ್ನು ಸೇರಲಿ, ಪ್ರಾಣವು ವಾಯುವಿನೊಂದಿಗೆ ಲೀನವಾಗಲಿ. ನೀನು ಪುಣ್ಯಕರವಾದ ಲೋಕಕ್ಕೆ ಹೋಗುವಂತಾಗಲಿ, ಅಲ್ಲಿ ನೀನು ಶರೀರ ಆಹಾರಗಳೊಂದಿಗೆ ಶಾಂತಿಯಿಂದ ಇರುವಂತಾಗಲಿ."

ಬಹಳ ಕಣ್ಣೀರು ಹಾಕುವುದು ಪ್ರೇತವು ಸ್ವರ್ಗಕ್ಕೆ ಹೋಗಲು ಒಂದು ಅಡಚಣೆ. ಆದ್ದರಿಂದಲೇ (ಗರುಡಪುರಾಣವೇ) ಮುಂತಾದ ಪುರಾಣವನ್ನು ಸ್ನಾನದ ನಂತರ ಓದಲಾಗುವುದು. ಇದು ಅವರ ಸಂಬಂಧಿಗಳ ದುಃಖವನ್ನು ಮರೆಸಿ ಕಣ್ಣೀರನ್ನು ತಡೆದು ಅವರ ಮನಸ್ಸಿಗೆ ಸಮಾಧಾನ ನೀಡುತ್ತದೆ.

ಈ ರೀತಿ ಗರ್ಭಧಾರಣೆ ಮೊದಲ್ಗೊಂಡು ಸಾವಿನವರೆಗೆ ವಿವಿಧ ಸಂಸ್ಕಾರಗಳನ್ನು ಆಚರಿಸಲಾಗುತ್ತದೆ. ಈ ಆಚರಣೆಗಳ ಉದ್ದೇಶಗಳು ಬದುಕನ್ನು ನೈಜಾರ್ಥದಲ್ಲಿ ಅಧ್ಯಾತ್ಮಗೊಳಿಸುವುದಷ್ಟೆ.

* * * *



## ಅನುಬಂಧ
## ವೇದಗಳು ಮತ್ತು ಅವುಗಳ ಶಾಖೆಗಳ ಪಟ್ಟಿ

| ೧<br>ವೇದಗಳು | ೨<br>ಮೂಲ<br>ಶಾಖೆಗಳ<br>ಸಂಖ್ಯೆ | ೩<br>ಉಪಲಬ್ಧ<br>ಶಾಖೆಗಳು | ೪<br>ಬ್ರಾಹ್ಮಣಗಳು | ೫<br>ಆರಣ್ಯಕಗಳು |
|---|---|---|---|---|
| ಋಗ್ವೇದ | ೨೧ | ಶಕಲ | ಐತರೇಯ<br>ಕೌಶೀತಕೀ<br>(ಶಾಂಖ್ಯಾಯನ) | ಐತರೆಯ<br>ಶಾಂಖ್ಯಾಯನಾ |
| ಕೃಷ್ಣ<br>ಯಜುರ್ವೇದ | ೮೫ | ತೈತ್ತಿರೀಯ<br>ಮೈತ್ರಾಯಣೀ ಕಠ<br>ಕಪಿಸ್ಥಲ<br>ಶ್ವೇತಾಶ್ವತರ | ತೈತ್ತಿರೀಯ<br>(ಸಂಹಿತಾ) | ತೈತ್ತಿರೀಯ |
| ಶುಕ್ಲ<br>ಯಜುರ್ವೇದ | ೧೭ | ಕಣ್ವ<br>ಮಾಧ್ಯಂದಿನ<br>(ವಾಜಸನೇಯ) | ಶತಪಥ | ಬೃಹದಾರಣ್ಯಕ |
| ಸಾಮವೇದ | ೧೦೧ | ಕೌತುಮ<br>ರನಾಯನೀಯ<br>ಜೈಮಿನೀಯ | ಪಂಚವಿಂಶ<br>ಷಡ್ವಿಂಶ<br>ಸಾಮವಿಧಾನ<br>ಆರ್ಷೇಯ ಮಂತ್ರ<br>ದೇವತಾಧ್ಯಾಯ<br>ವಂಶ ಜೈಮಿನೀಯ | – |
| ಅಥರ್ವವೇದ | ೯ | ಪಿಪ್ಪಲಾದ<br>ಶೌನಕ | ಗೋಪಥ | – |

| ೬<br>ಉಪನಿಷತ್ತುಗಳು | ೭<br>ಶ್ರೌತಸೂತ್ರಗಳು | ೮<br>ಗೃಹ್ಯಸೂತ್ರಗಳು | ೯<br>ಧರ್ಮಸೂತ್ರ | ೧೦<br>ಉಪವೇದ |
|---|---|---|---|---|
| ಐತರೇಯ<br>ಕೌಶೀತಕಿ<br>ಭಾಷ್ಕಲ | ಆಶ್ವಲಾಯನ<br>ಶಾಂಖ್ಯಾಯನ | ಆಶ್ವಲಾಯನ<br>ಶಾಂಖ್ಯಾಯನ | ವಸಿಷ್ಠ | ಆಯುರ್ವೇದ |
| ಐತರೇಯ<br>ಮಹಾನಾರಾಯಣ<br>ಮಿತ್ರಾಯಣಿ<br>ಕಾಠಕ<br>ಶ್ವೇತಾಶ್ವತರ | ಆಪಸ್ತಂಭ ಬೌಧಾಯನ<br>ಹಿರಣ್ಯಕೇಶಿ ಭಾರದ್ವಾಜ<br>ವೈಖಾನಸ ವಧೂಲ<br>ಮಾನವ ವರಾಹ | ಮಾನವ ಆಪಸ್ತಂಭ<br>ಬೌಧಾಯನ<br>ಹಿರಣ್ಯಕೇಶಿ<br>ವೇಖಾನಸ ಕಠ | ಆಪಸ್ತಂಭ<br>ಬೌಧಾಯನ<br>ಹಿರಣ್ಯಕೇಶಿ | ಧನುರ್ವೇದ |
| ಈಶಾವಾಸ್ಯ<br>ಬೃಹದಾರಣ್ಯಕ | ಕಾತ್ಯಾಯನ<br>(ಪಾರಸ್ಕರ) | ಕಾತ್ಯಾಯನ<br>(ಪಾರಸ್ಕರ) | – | ಧನರ್ವೇದ |
| ಛಾಂದೋಗ್ಯ<br>ಕೇನ | ಖಾದಿರ<br>ಲಾತ್ಯಾಯನ<br>ದ್ರಹ್ಯಾಯನ<br>ಜೈಮಿನೀಯ | ಕದಿರ<br>ಗೋಭಿಲ<br>ಗೌತಮ<br>ಜೈಮಿನೀಯ | ಗೌತಮ | ಗಾಂಧರ್ವ ವೇದ |
| ಪ್ರಶ್ನೆ<br>ಮುಂಡಕ<br>ಮಾಂಡೂಕ್ಯ | ವೈಖಾನಸ | ಕೌಶಿಕ | – | ಅರ್ಥಶಾಸ್ತ್ರ |